ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಮೇ 19, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 05 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

# ರಾಜ್ಯದಲ್ಲಿನ್ನು ಜೋಡೆತ್ತಿನ ಸರ್ಕಾರ

## ಸಿದ್ದರಾಮಯ್ಯ ಮುಖ್ಯಮಂತ್ರಿ, ಡಿಕೆಶಿ ಉಪ ಮುಖ್ಯಮಂತ್ರಿ, 20ರಂದು ಪ್ರಮಾಣ ವಚನ

ಬೆಂಗಳೂರು, ಮೇ 18 - ಪ್ರದೇಶ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು ಕರ್ನಾಟಕದ ಮುಖ್ಯಮಂತ್ರಿಯಾಗಿ ಮತ್ತು ಡಿ.ಕೆ. ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿಯು ಎಐಸಿಸಿ ದೆಹಲಿಯಲ್ಲಿಂದು ಅಧಿಕೃತ ಘೋಷಣೆ ಮಾಡಿದೆ.

ಮೇ 20 ರಂದು ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಉಭಯ ನಾಯಕರು ಅಧಿಕಾರ ಗೌಪ್ಯತಾ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಅಂದು ಮಧ್ಯಾಹ್ನ 12.30ಕ್ಕೆ ನಡೆಯುವ ಸಮಾರಂಭದಲ್ಲಿ ರಾಜ್ಯಪಾಲ ತಾವರಚಂದ್ ಗೆಹ್ಲೋಟ್ ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.

ಕಳೆದ ನಾಲ್ಕು ದಿನಗಳಿಂದ ದೆಹಲಿಯಲ್ಲಿ ನಾಯಕತ್ವಕ್ಕಾಗಿ ನಡೆದ ಮುಸುಕಿನ ಗುದ್ದಾಟಕ್ಕೆ ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾಗಾಂಧಿ ಮಧ್ಯೆ ಪ್ರವೇಶಿಸಿದ ನಂತರ ಇಂದು ಮುಂಜಾನೆ 2 ಗಂಟೆಗೆ ನಾಯಕತ್ವದ ವಿವಾದ ಬಗೆಹರಿಯಿತು.

ಎಐಸಿಸಿಯೇ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅಭ್ಯರ್ಥಿಗಳ ಘೋಷಣೆ ಮಾಡಿದ ನಂತರ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ಆಯ್ಕೆಗೊಂಡಿದ್ದಾರೆ ಎಂಬ ಪತ್ರವನ್ನು ಮಾಜಿ



ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ, ಈ ಪತ್ರ ನೀಡಿದರು.

ಸರ್ಕಾರ ರಚನೆಗೆ ಹಕ್ಕು ಪ್ರತಿಪಾದನೆ ಮಾಡಿರುವುದಲ್ಲದೆ, ವಿಧಾನಸಭೆಯಲ್ಲಿ ಬಹುಮತ ಪಡೆದಿರುವ ನಮ್ಮ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ನೀಡಬೇಕು ಹಾಗೂ ಈ ಸರ್ಕಾರದ ನಾಯಕತ್ವವನ್ನು ಸಿದ್ದರಾಮಯ್ಯ ಅವರು ವಹಿಸಲಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸುವಂತೆ ಮನವಿ ಪತ್ರ ನೀಡಿದರು.

ಎಐಸಿಸಿ ನೀಡಿದ ಪತ್ರಕ್ಕೆ ರಾಜ್ಯಪಾಲರು ಸಮ್ಮತಿಸಿ, ಮುಂದಿನ ಕಾರ್ಯಕ್ರಮ ರೂಪಿಸಲು ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಆದೇಶ ಮಾಡಿದ್ದಾರೆ.

ನಿನ್ನೆ ರಾತ್ರಿಯವರೆಗೂ ಸಿಎಲ್‌ಪಿ ನಾಯಕತ್ವದ ಗುದ್ದಾಟ ಯಾವ ಹಂತಕ್ಕೆ ತಲುಪಲಿದೆ ಎಂಬುವ ಸಮಯದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್, ಸೋನಿಯಾಗಾಂಧಿಯವರನ್ನು ಭೇಟಿ ಮಾಡಿ, ನಾಯಕತ್ವದ ವಿಷಯಕ್ಕೆ ತೆರೆ ಎಳೆಯುವಂತೆ ಮನವಿ ಮಾಡಿಕೊಂಡರು.

ನಾಯಕತ್ವಕ್ಕಾಗಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ತಮ್ಮ ಹಕ್ಕು ಪ್ರತಿಪಾದನೆಯಲ್ಲಿ ಹಿಂದೆ ಸರಿಯದಿದ್ದಾಗ ಸೋನಿಯಾ ಅವರು ಶಿವಕುಮಾರ್ ಅವರನ್ನು ಸಂಪರ್ಕಿಸಿ, ನಾವು ಮತ್ತು ಪಕ್ಷ ನಿಮ್ಮ ಪರ ಇದ್ದೇವೆ. ನೀವು ಪಕ್ಷಕ್ಕೆ ಸಲ್ಲಿಸಿರುವ ಸೇವೆಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮೊದಲ ಅವಧಿಯಲ್ಲಿ ಸಿದ್ದರಾಮಯ್ಯ ನವರು ಮುಖ್ಯಮಂತ್ರಿಯಾಗಲಿ, ನಂತರದ ಅವಧಿಯನ್ನು (2ನೇ ಪುಟಕ್ಕೆ)

# ಭದ್ರಾ ನಾಲೆಯಲ್ಲಿ 25ರವರೆಗೆ ನೀರು ಹರಿಸುವ ಸಾಧ್ಯತೆ

**ರೈತರ ನಿಯೋಗಕ್ಕೆ ಭರವಸೆ**

ಮಲೇಬೆನ್ನೂರು, ಮೇ 18- ಪ್ರಸಕ್ತ ಸಾಲಿನ ಬೇಸಿಗೆ ಹಂಗಾಮಿನ ಬೆಳೆಗಳಿಗೆ ಭದ್ರಾ ಬಲದಂಡೆ ನಾಲೆಯಲ್ಲಿ ಮೇ 25 ರವರೆಗೆ ನೀರು ಹರಿಸುವುದನ್ನು ಮುಂದುವರೆಸುವುದಾಗಿ ಭದ್ರಾ ಅಧೀಕ್ಷಕ ಅಭಿಯಂತ ರರಾದ ಸುಜಾತ ಅವರು ಭರವಸೆ ನೀಡಿದ್ದಾರೆ ಎಂದು ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ ತಿಳಿಸಿದರು.

ಗುರುವಾರ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರ ನಿಯೋಗ ಬಿಆರ್‌ಪಿಯಲ್ಲಿರುವ ಭದ್ರಾ ಎಸ್‌ಇ ಕಛೇರಿಯಲ್ಲಿ ಸುಜಾತ ಅವರನ್ನು ಭೇಟಿ ಮಾಡಿ ಕೊನೆ ಭಾಗದಲ್ಲಿ ಭತ್ತದ ಬೆಳೆ ಈಗ ಕಾಳು ಕಟ್ಟಿದ್ದು, ಕನಿಷ್ಠ ಮೇ 30 ರವರೆಗೂ ನೀರು ಮುಂದುವರೆಸಿ ಎಂದು ಮನವರಿಕೆ ಮಾಡಿಕೊಟ್ಟರು.

ರೈತರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸುಜಾತ ಅವರು ಮೇ 30ರ ವರೆಗೆ ನೀರು ನಾಲೆಯಲ್ಲಿ ನೀರು (2ನೇ ಪುಟಕ್ಕೆ)

# ಕಂಬಳಕ್ಕೆ ಅಸ್ತು ಎಂದ ಸುಪ್ರೀಂ ಕೋರ್ಟ್

ನವದೆಹಲಿ, ಮೇ 18 – ಕರ್ನಾಟಕದ ಕೆಲ ಭಾಗಗಳಲ್ಲಿ ನಡೆಸಲಾಗುವ ಕಂಬಳ ಕ್ರೀಡೆಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಈ ಬಗ್ಗೆ ಸರ್ವಸಮ್ಮತಿಯ ತೀರ್ಪು ನೀಡಿ, ಪ್ರಾಣಿಗಳ ಕ್ರೌರ್ಯ ತಡೆ (ಕರ್ನಾಟಕ ಎರಡನೇ ತಿದ್ದುಪಡಿ) ಕಾಯ್ದೆ, 2017ರ ಸಿಂಧುತ್ವವನ್ನು ಎತ್ತಿ ಹಿಡಿದಿದೆ. ನವೆಂಬರ್‌ನಿಂದ ಮಾರ್ಚ್ ನಡುವೆ ರಾಜ್ಯದಲ್ಲಿ ಕೋಣಗಳ ಕಂಬಳ ಸ್ಪರ್ಧೆ ನಡೆಸಲಾಗುತ್ತದೆ. ಕಂಬಳ ಸ್ಪರ್ಧೆಗೆ ಅವಕಾಶ ಮಾಡಿಕೊಡಲು ರಾಜ್ಯ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದಿತ್ತು.

# ನನಗೂ ಉಪಮುಖ್ಯಮಂತ್ರಿ ಹುದ್ದೆ ಬೇಕೆಂದ ಜಿ. ಪರಮೇಶ್ವರ್



ಬೆಂಗಳೂರು, ಮೇ 18 – ತಮಗೂ ಉಪ ಮುಖ್ಯಮಂತ್ರಿ ಸ್ಥಾನ ಕಲ್ಪಿಸಬೇಕು ಹಾಗೂ ದಲಿತರಿಗೆ ಸರ್ಕಾರದಲ್ಲಿ ಸೂಕ್ತ ಪ್ರಾತಿನಿಧ್ಯ ಇರಬೇಕು ಎಂದು ಕಾಂಗ್ರೆಸ್ ಹಿರಿಯ ನಾಯಕ ಜಿ. ಪರಮೇಶ್ವರ್ ಒತ್ತಾಯಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಉಪ ಮುಖ್ಯಮಂತ್ರಿ ಸ್ಥಾನದ ಬಗ್ಗೆ ನಾನು ಕೇಳುವುದೇನೂ ಇಲ್ಲ. ನನಗೆ ಕೊಡಲೇಬೇಕು. ಆ ನಿರೀಕ್ಷೆ ನನಗಿದೆ ಎಂದು ಹೇಳಿದರು. ಈ ಬಾರಿ ಕಾಂಗ್ರೆಸ್ ಪಕ್ಷದಿಂದ 51 ದಲಿತರು ಕಣಕ್ಕಿಳಿದಿದ್ದರು. ಇವರ ಪೈಕಿ 37 ಜನ ಗೆದ್ದಿದ್ದಾರೆ. ದಲಿತರ ಮತಗಳ ಪರಿಣಾಮ ಬೇರೆ ಕ್ಷೇತ್ರಗಳಲ್ಲೂ ಆಗಿದೆ. ಸಮುದಾಯಕ್ಕೆ ಯಾವ (3ನೇ ಪುಟಕ್ಕೆ)

# ಸಿದ್ದರಾಮಯ್ಯ ನನ್ನ ಬಾಸ್ ಅಲ್ಲ : ಡಿಕೆಶಿ



ನವದೆಹಲಿ, ಮೇ 18 – ನಾನು ಉಪ ಮುಖ್ಯಮಂತ್ರಿ ಸ್ಥಾನ ನಿರ್ವಹಿಸುವ ಜೊತೆಗೆ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷನಾಗಿಯೂ ಕಾರ್ಯನಿರ್ವಹಿಸಲಿದ್ದೇನೆ. ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನಗೆ 'ಬಾಸ್' ಅಲ್ಲ ಎಂದು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಸಂಸ್ಥೆಯೊಂದರ ಜೊತೆ ಮಾತನಾಡಿದ ಅವರು, ನಾವೆಲ್ಲರೂ ಜೊತೆಯಾಗಿ ಹಾಗೂ ತಂಡವಾಗಿ ಕಾರ್ಯನಿರ್ವಹಿಸಬೇಕಿದೆ. ಸಿದ್ದರಾಮಯ್ಯ ಬಾಸ್ ಅಲ್ಲ, ಮುಖ್ಯಮಂತ್ರಿ ಆಗಿರಲಿದ್ದಾರೆ. ಬಾಸ್ ವ್ಯವಸ್ಥೆಯಲ್ಲಿ ನಾನು ಕೆಲಸ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ.

1985ರಲ್ಲಿ ಮೊದಲ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೆ. ನಂತರ 8 ಬಾರಿ ನಿರಂತರವಾಗಿ ಶಾಸಕನಾಗಿದ್ದೇನೆ. ನನ್ನದೇ ಆದ ಅನುಭವ (3ನೇ ಪುಟಕ್ಕೆ)


# ಪುಣ್ಯಸ್ಮರಣೆ



ಜನನ: 18.8.1955
ಮರಣ : 19.5.2021

## ಶ್ರೀ ಕೆ.ಹೆಚ್. ಓಬಳಪ್ಪನವರು

(ನಿವೃತ್ತ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು)
(ದಾವಣಗೆರೆ ಜಿಲ್ಲಾ ಪಂಚಾಯ್ತಿ ಸದಸ್ಯರು, ಲೋಕಿಕೆರೆ ಕ್ಷೇತ್ರ
ಹಾಗೂ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷರು)

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ
ಹೆಜ್ಜೆ - ಹೆಜ್ಜೆಗೂ ನಿಮ್ಮ ನೆನಪುಗಳ ಸ್ಫೂರ್ತಿಯೊಂದಿಗೆ ಮುನ್ನಡೆಯುತ್ತಿದ್ದೇವೆ.
ಜೀವನದ ಎಲ್ಲಾ ಹಂತಗಳಲ್ಲೂ ನಿಮ್ಮ ಅಸ್ತಿತ್ವದ ಅನುಭೂತಿ
ನಮಗೆ ದೊರೆಯುತ್ತಿದೆ. ಎಂದೆಂದಿಗೂ ನೀವೇ ನಮಗೆ ದಾರಿ ದೀಪ
ಮತ್ತು ನಮ್ಮ ಹೃದಯಗಳಲ್ಲಿ ಚಿರಸ್ಥಾಯಿಯಾಗಿ-ಶಾಶ್ವತವಾಗಿ ಕಂಗೊಳಿಸುತ್ತಿರುವಿರಿ.

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ
**ಎರಡನೇ ವರ್ಷದ ಪುಣ್ಯ ಸ್ಮರಣೆಯನ್ನು**
**ದಿನಾಂಕ 26.05.2023ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಹೂವಿನಮಡು ಗ್ರಾಮದ ಸ್ವಗೃಹದಲ್ಲಿ**
ಏರ್ಪಡಿಸಲಾಗಿದ್ದು, ತಾವುಗಳು ಅವರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗದವರು
**ಬಂಧು – ಮಿತ್ರರು ಮತ್ತು ಹಿತೈಷಿಗಳು**
**ಹಾಗೂ ಹೂವಿನಮಡು ಗ್ರಾಮಸ್ಥರು.**


# ಕೇರಳ ಸ್ಟೋರಿ ಮೇಲಿನ ಬಂಗಾಳದ ನಿಷೇಧ ತೆರವು

ನವದೆಹಲಿ, ಮೇ 18 – 'ದಿ ಕೇರಳ ಸ್ಟೋರಿ' ಚಿತ್ರ ಪ್ರದರ್ಶನದ ಮೇಲೆ ಪಶ್ಚಿಮ ಬಂಗಾಳ ಸರ್ಕಾರ ಹೇರಿದ್ದ ನಿಷೇಧವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಆದೇಶ ಹೊರಡಿಸಿದೆ.

ಇದೇ ವೇಳೆ 32 ಸಾವಿರ ಹಿಂದೂ ಹಾಗು ಕ್ರಿಶ್ಚಿಯನ್ನರನ್ನು ಇಸ್ಲಾಂಗೆ ಮತಾಂತರಗೊಳಿಸಲಾಗಿದೆ ಎಂದು ಚಿತ್ರದಲ್ಲಿ ಹೇಳುವುದಕ್ಕೂ ನ್ಯಾಯಾಲಯ ತಡೆ ಹಾಕಿದೆ. ಈ ರೀತಿ ಹೇಳಲು ಯಾವುದೇ ಅಧಿಕೃತ ದಾಖಲೆ ಇಲ್ಲ, ಇದು ಕಲ್ಪಿತ ಚಿತ್ರಣ ಎಂದು ತಿಳಿಸಬೇಕು ಎಂದು ಹೇಳಿದೆ.

# ಬಿಹಾರ ಜಾತಿ ಗಣತಿ ಅನುಮೋದಿಸಲು ಸುಪ್ರೀಂ ನಕಾರ

ನವದೆಹಲಿ, ಮೇ 18 – ಬಿಹಾರ ಸರ್ಕಾರ ಕೈಗೊಂಡಿದ್ದ ಜಾತಿ ಗಣತಿ ತಡೆಯಲು ಪಾಟ್ನಾ ಹೈಕೋರ್ಟ್ ನ್ಯಾಯಾಲಯ ಹೊರಡಿಸಿದ್ದ ಮಧ್ಯಂತರ ಆದೇಶವನ್ನು ತಳ್ಳಿ ಹಾಕಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಬಿಹಾರದಲ್ಲಿ ಜನವರಿ 7ರಿಂದ 21ರ ನಡುವೆ ಮೊದಲ ಹಂತದ ಜಾತಿ ಗಣತಿ ನಡೆದಿತ್ತು. ಏಪ್ರಿಲ್ 15ರಿಂದ ಎರಡನೇ ಹಂತದ ಜಾತಿ ಗಣತಿ ಆರಂಭವಾಗಿತ್ತು.

ಜಾತಿ ಗಣತಿ ನಡೆಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಸಮೀಕ್ಷೆಯ ಹೆಸರಿನಲ್ಲಿ ಗಣತಿ ನಡೆಸಲಾಗದು ಎಂದು ಹೇಳಿದ್ದ ಹೈಕೋರ್ಟ್, ಗಣತಿಗೆ ತಡೆ ಹಾಕಿತ್ತು. ಹೈಕೋರ್ಟ್ (2ನೇ ಪುಟಕ್ಕೆ)


## ದಾವಣಗೆರೆ ತಾಲ್ಲೂಕು ಗೋಪನಾಳು ಗ್ರಾಮದ
## ಶರಣೆ ಶ್ರೀಮತಿ ಸುವರ್ಣ ಕೆಂಚನಗೌಡ ನಿಧನ




ದಾವಣಗೆರೆ ತಾಲ್ಲೂಕು ಗೋಪನಾಳು ಗ್ರಾಮದ, ದಾವಣಗೆರೆ ಎಂಸಿಸಿ "ಬಿ" ಬ್ಲಾಕ್,
#3622, 8ನೇ ಮೇನ್, 5ನೇ ಕ್ರಾಸ್ ವಾಸಿ
ಡಾ।। ಎಸ್.ಕೆ. ಕೆಂಚನಗೌಡ, MSc., (Agr) Phd.,
ನಿವೃತ್ತ ಪ್ರಾಧ್ಯಾಪಕರು, ಜಿ.ಕೆ.ವಿ.ಕೆ, ಬೆಂಗಳೂರು., ಇವರ ಧರ್ಮಪತ್ನಿ
**ಶ್ರೀಮತಿ ಸುವರ್ಣ ಕೆಂಚನಗೌಡ**
ಇವರು ದಿನಾಂಕ : 17.05.2023 ಸಂಜೆ 5.10ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 79 ವರ್ಷ ವಯಸ್ಸಾಗಿತ್ತು. ಇವರು ಪತಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು
ದಿನಾಂಕ : 19.05.2023ರ ಶುಕ್ರವಾರ ಮಧ್ಯಾಹ್ನ 2.00 ಗಂಟೆಗೆ ದಾವಣಗೆರೆ ತಾಲ್ಲೂಕು,
ಗೋಪನಾಳು ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.
ಶುಕ್ರವಾರ 19.05.2023ರ ಬೆಳಿಗ್ಗೆ 8.00 ರಿಂದ 11.00ರ ವರೆಗೆ
#3622, 8ನೇ ಮೇನ್, 5ನೇ ಕ್ರಾಸ್, ಎಂಸಿಸಿ 'ಬಿ' ಬ್ಲಾಕ್ ಮನೆಯಲ್ಲಿ ಸಾರ್ವಜನಿಕರ ದರ್ಶನಕ್ಕೆ
ವ್ಯವಸ್ಥೆ ಮಾಡಲಾಗಿದೆ. ನಂತರ ಗೋಪನಾಳು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ :
ಶ್ರೀ ಡಾ।। ಎಸ್.ಕೆ. ಕೆಂಚನಗೌಡ ಮತ್ತು ಸಹೋದರರು, ಸಹೋದರಿಯರು
ಡಾ।। ತಾರಾಮಣಿ ಎಸ್.ಕೆ. ಮತ್ತು ಡಾ।। ಶ್ರೀ ನಾಗನಗೌಡ, (ಯು.ಎಸ್.ಎ) ಮತ್ತು ಚಿ।। ಯಶಸ್
ಶ್ರೀಮತಿ ದೇವಿಕ ಎಸ್.ಕೆ. ಮತ್ತು ಶ್ರೀ ರವಿಕುಮಾರ್ ಕೆ.ವಿ. ಮತ್ತು ಕು।। ಯಶಿತಾ
ಸಣ್ಣಕಲ್ಲಪ್ಪರ ವಂಶಸ್ಥರು, ಗೋಪನಾಳು, ದಾವಣಗೆರೆ ತಾಲ್ಲೂಕು
ಗೌಡ್ರು ಮತ್ತು ಪಟೇಲ್ ವಂಶಸ್ಥರು, ಕೊಂಡಜ್ಜಿ, ಹರಿಹರ ತಾಲ್ಲೂಕು ಹಾಗೂ ಬಂಧು-ಮಿತ್ರರು
ಫೋನ್ : 99459 62724, 99160 17502



manipalhospitals
LIFE'S ON



ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರಿನ ಪ್ರಖ್ಯಾತ ವಾಸ್ಕ್ಯುಲರ್ ಶಸ್ತ್ರಚಿಕಿತ್ಸಾ ತಜ್ಞರು ಪ್ರತಿ ತಿಂಗಳ ಮೂರನೇ ಭಾನುವಾರದಂದು ಆರೈಕೆ ಆಸ್ಪತ್ರೆ, ದಾವಣಗೆರೆಯಲ್ಲಿ ಸಮಾಲೋಚನೆಗೆ ಲಭ್ಯವಿರುತ್ತಾರೆ

21ನೇ ಮೇ, 2023
ಬೆಳಗ್ಗೆ 10:00 ಘಂಟೆಯಿಂದ ಮಧ್ಯಾಹ್ನ 1:00 ಘಂಟೆಯವರೆಗೆ
ಆರೈಕೆ ಆಸ್ಪತ್ರೆ
ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ

**ಡಾ. ರಾಜೇಂದ್ರ ಪ್ರಸಾದ್ ಬಿ**
ಎಂಬಿಬಿಎಸ್, ಎಂ.ಎಸ್, ಡಿಎನ್‌ಬಿ (ರಕ್ತನಾಳ ಶಸ್ತ್ರಚಿಕಿತ್ಸೆ), ಎಫ್‌ವಿಇಎಸ್ (ಆಸ್ಟ್ರಿಯಾ)
ಸಲಹೆಗಾರರು – ವಾಸ್ಕ್ಯುಲರ್ ಮತ್ತು ಎಂಡೋವಾಸ್ಕ್ಯುಲರ್ ಸರ್ಜರಿ
ಮಣಿಪಾಲ್ ಆಸ್ಪತ್ರೆ ಯಶವಂತಪುರ, ಬೆಂಗಳೂರು.

ಈ ಸಮಸ್ಯೆಗಳ ಕುರಿತು ತಜ್ಞರೊಂದಿಗೆ ಸಲಹೆ ಪಡೆಯಿರಿ
ಉಬ್ಬಿರುವ ರಕ್ತನಾಳಗಳು । ಕೈ ಮತ್ತು ಕಾಲುಗಳ ಊತ ಮತ್ತು ನೋವು । ಮಧುಮೇಹ ಕಾಲು । ಡಯಾಲಿಸಿಸ್ । ವಾಸಿಯಾಗದ ಗಾಯಗಳು । ಕಾಲು ಬೆರಳುಗಳ ಬಣ್ಣ ಬದಲಾವಣೆ । ಗ್ಯಾಂಗ್ರೀನ್ ಮತ್ತು ಇನ್ನೂ ಅನೇಕ ಸಮಸ್ಯೆಗಳು

Manipal Hospital Yeshwanthpur
Brigade Gateway, #26/4, 80 Feet, Dr. Rajkumar Road, Malleshwaram West, Bengaluru 560 055, Karnataka.
P 080 6165 6262

ನಿಮ್ಮ ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ!
Harishkumar
+91 80505 60580

## ರಾಜ್ಯದಲ್ಲಿನ್ನು ಜೋಡೆತ್ತಿನ ಸರ್ಕಾರ

**(1ನೇ ಪುಟದಿಂದ)** ನೀವು ಪಡೆದುಕೊಳ್ಳಿ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವೇಣುಗೋಪಾಲ್ ಅವರು ನಿಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಲಿದ್ದಾರೆ. ವಿಳಂಬ ಮಾಡದೇ ಸರ್ಕಾರ ರಚನೆ ಮಾಡಿ ಎಂದು ಕಿವಿಮಾತು ಹೇಳಿದರು ಎನ್ನಲಾಗಿದೆ.

ಅಲ್ಲಿಯವರೆಗೂ ಪಟ್ಟು ಹಿಡಿದಿದ್ದ ಶಿವಕುಮಾರ್ ತಮ್ಮ ನಿಲುವನ್ನು ಸಡಿಲಿಸಿ, ಸಿದ್ದರಾಮಯ್ಯ ನಾಯಕತ್ವದಲ್ಲಿ ಸರ್ಕಾರ ರಚನೆಗೆ ಸಮ್ಮತಿಸಿದರು. ಇಂದು ಮುಂಜಾನೆ ಖರ್ಗೆ ಹಾಗೂ ವೇಣುಗೋಪಾಲ್ ಮನೆಯಲ್ಲಿ ಸುದೀರ್ಘ ಚರ್ಚೆ ನಡೆಸಿದ ನಂತರ ಶನಿವಾರ ಸರ್ಕಾರ ರಚಿಸಲು ನಾಯಕರು ತೀರ್ಮಾನ ಕೈಗೊಂಡರು.

ಚರ್ಚೆ ಸಂದರ್ಭದಲ್ಲಿ ಶಿವಕುಮಾರ್ ಅವರನ್ನು ಒಬ್ಬರೇ ಉಪಮುಖ್ಯಮಂತ್ರಿಯಾಗಿ ನೇಮಿಸುವುದು, ಅಲ್ಲದೆ ಅವರಿಗೆ ಇಂಧನ ಮತ್ತು ಬೃಹತ್ ನೀರಾವರಿ ಇಲಾಖೆಯ ಹೊಣೆಗಾರಿಕೆ ವಹಿಸುವುದು. ಅಲ್ಲದೆ, ಮುಂಬರುವ ಲೋಕಸಭಾ ಚುನಾವಣೆಯವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯಲು ಪಕ್ಷ ಸಮ್ಮತಿಸಿತು.

ಅವರ ಕೋರಿಕೆಯಂತೆ ನಗರದಲ್ಲಿ ತುರ್ತು ಶಾಸಕಾಂಗ ಸಭೆ ನಡೆಸಿ, ಆ ಸಭೆಯಲ್ಲಿ ಎಐಸಿಸಿಯಲ್ಲಿ ಆಗಿರುವ ಒಪ್ಪಂದವನ್ನು ಶಾಸಕರ ಮುಂದೆ ಸಿದ್ದರಾಮಯ್ಯನವರೇ ಬಹಿರಂಗಪಡಿಸಬೇಕು.

ಮೊದಲ ಎರಡೂವರೆ ವರ್ಷ ಅವಧಿ ತಮಗೂ, ನಂತರದ ಅವಧಿಯನ್ನು ಶಿವಕುಮಾರ್‌ಗೆ ಬಿಟ್ಟುಕೊಡುವ ಒಪ್ಪಂದಕ್ಕೆ ನಾಲ್ಕು ಗೋಡೆಗಳ ಮಧ್ಯೆ ಶಾಸಕರ ಗಮನಕ್ಕೆ ತರುವುದು ಹಾಗೂ ಅಧಿಕಾರ ಹಂಚಿಕೆ ಸೂತ್ರವನ್ನು ಬಹಿರಂಗಪಡಿಸುವ ನಿರ್ಧಾರ ಕೈಗೊಳ್ಳಲಾಯಿತು.

ಅಲ್ಲದೆ ಸಂಪುಟ ರಚನೆ ಸಂದರ್ಭದಲ್ಲಿ ಶಿವಕುಮಾರ್ ಹೆಸರಿಸುವ ಕೆಲವರಿಗೆ ಅವಕಾಶ ಮಾಡಿಕೊಡಲು ಎಐಸಿಸಿ ಸಮ್ಮತಿ ನೀಡಿದೆ ಎಂದು ಮೂಲಗಳು ಹೇಳಿವೆ.

ಈ ಸಮ್ಮತಿಯ ನಂತರವೇ ಇಂದು ಮುಂಜಾನೆ ವೇಣುಗೋಪಾಲ್ ಪತ್ರಿಕಾಗೋಷ್ಠಿ ನಡೆಸಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಎಲ್ಲಾ ಹಿರಿಯ ನಾಯಕರ ಜತೆ ಚರ್ಚೆ ಮಾಡಿ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಅಭಿಪ್ರಾಯ ಪಡೆದು ಸಿದ್ದರಾಮಯ್ಯ ಅವರನ್ನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ರಾಜ್ಯದ ಏಕೈಕ ಉಪಮುಖ್ಯಮಂತ್ರಿ ಹಾಗೂ ಮುಂಬರುವ ಲೋಕಸಭಾ ಚುನಾವಣೆವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಸಲು ತೀರ್ಮಾನಿಸಲಾಗಿದೆ ಎಂದರು.

# ರೈತರು ಕೌಶಲ್ಯಾಭಿವೃದ್ಧಿಯಲ್ಲಿ ಕೊಯ್ಲೋತ್ತರ ತಂತ್ರಜ್ಞಾನಗಳ ಮಾಹಿತಿ ಅರಿಯಬೇಕು

## ಹೊನ್ನಾಳಿ : ತೋಟಗಾರಿಕೆ ಇಲಾಖೆ ನಿರ್ದೇಶಕ ವೀರಭದ್ರಪ್ಪ ಕರೆ



ಹೊನ್ನಾಳಿ, ಮೇ 18 - ಪ್ರಸಕ್ತ ವರ್ಷದ ಮುಂಗಾರು ಹಂಗಾಮಿಗೆ ರೈತರ ಕೃಷಿ ಚಟುವಟಿಕೆಗೆ ಸಹಕರಿಸಲು ಕೃಷಿ ಇಲಾಖೆ ಪೂರ್ವ ಸಿದ್ಧತೆಯೊಂದಿಗೆ ಬಿತ್ತನೆ ಬೀಜ, ರಸಗೊಬ್ಬರಗಳ ವಿತರಣೆ ಹಾಗು ದಾಸ್ತಾನುಗಳೊಂದಿಗೆ ರೈತರಿಗೆ ಬೇಕಿರುವ ಅಗತ್ಯ ಕೃಷಿ ಪರಿಕರಗಳು ಲಭ್ಯವಿರುವಂತೆ ನೊಡಿಕೊಳ್ಳಬೇಕಿದೆ ಎಂದು ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಬಿದಿರುಗಡ್ಡೆ ಜಯಣ್ಣ ಹೇಳಿದರು.

2023-24 ನೇ ಸಾಲಿನ ಕೃಷಿ ಇಲಾಖೆಯಲ್ಲಿ ಆತ್ಮಯೋಜನೆಗೆ ಕ್ರಿಯಾ ಯೋಜನೆ ತಯಾರಿಕೆಯ ಬಗ್ಗೆ ಕೃಷಿ ಇಲಾಖೆ ಹಾಗು ಕೃಷಿಕ ಸಮಾಜದ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರಾದ ಎ.ಎಸ್. ಪ್ರತಿಮ ಪ್ರಾಸ್ತಾವಿಕವಾಗಿ ಮಾತನಾಡಿ, ಆತ್ಮಯೋಜನೆಯಡಿ ಕೈಗೊಳ್ಳಬಹುದಾದ ಕಾರ್ಯ ಯೋಜನೆಯ ಅಳವಡಿಕೆಯ ಕುರಿತು ಸಹೋದ್ಯೋಗಿ ಇಲಾಖೆಯ ಮುಖ್ಯಸ್ಥರೊಂದಿಗೆ ಚರ್ಚೆ ನಡೆಸುವ ಮೂಲಕ ಯೋಜನೆಯ ಯಶಸ್ಸಿಗೆ ಸಲಹೆ ನೀಡುವಂತೆ ಮನವಿ ಮಾಡಿದರು.

ತೋಟಗಾರಿಕೆ ಇಲಾಖೆಯ ನಿರ್ದೇಶಕ ವೀರಭದ್ರಪ್ಪ ಮಾತನಾಡಿ, ಪಾಲಿಹೌಸ್ ನಲ್ಲಿ ತರಕಾರಿ ಬೆಳೆಗಳನ್ನು ಬೆಳೆಯಲು ಯೋಜನೆ ಅಳವಡಿಕೆ ಮತ್ತು ಹೂವು, ಹಣ್ಣು ತಯಾರಿಕೆ ಬೆಳೆಗಳ ಬಗ್ಗೆ ತರಬೇತಿಗಳ ಆಯೋಜನೆ ಹಾಗು ಇಲಾಖೆಯ ಕೃಷಿ ಬೀಜಗಳ ಬಗ್ಗೆ ವಿವರಿಸಿ ವಿವಿಧ ಬೆಳೆಗಳಿಗೆ ರಸವರಿ ಪದ್ಧತಿ ಅಳವಡಿಕೆ, ಕೌಶಲ್ಯಾಭಿವೃದ್ಧಿಯಲ್ಲಿ ಕೊಯ್ಲೋತ್ತರ ತಂತ್ರಜ್ಞಾನಗಳ ಮಾಹಿತಿ ರೈತರು ಅರಿಯಬೇಕೆಂದರು.

ರೇಷ್ಮೆ ಇಲಾಖೆ ನಿರೀಕ್ಷಕ ಜಗದೀಶ್ವರ ಮಾತನಾಡಿ, ರೇಷ್ಮೇ ಬೆಳೆಯುವ ರೈತರಿಗೆ ಇಲಾಖೆಯ ಅನುದಾನದ ಲಭ್ಯತೆಯೊಂದಿಗೆ ಸೋಲಾರ್ ವ್ಯವಸ್ಥೆ ಬಳಕೆ ಮಾಹಿತಿ ನೀಡಿದರು.

ಎಪಿಎಂಸಿ ಸಹಾಯಕ ಅಧಿಕಾರಿ ಹನುಮಂತ ಗೌಡ ಮಾತನಾಡಿ, ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ನಿಗದಿಯ ಕಾರಣಕ್ಕಾಗಿ ಬೆಳೆ ವರ್ಗೀಕರಣದಿಂದ ರೈತರಿಗೆ ಸ್ಪರ್ಧಾತ್ಮಕ ಬೆಲೆಯನ್ನು ಒದಗಿಸಿಕೊಡಲು ಸಹಕರಿಸಲಿದೆ ಎಂದರು.

ವಲಯ ಅರಣ್ಯಾಧಿಕಾರಿ ಡಿ. ಎಂ. ಷಣ್ಮುಖಪ್ಪ ಮಾತನಾಡಿ, ಅರಣ್ಯ ಕೃಷಿ ಪದ್ಧತಿ ಅತಿಮುಖ್ಯವಾದ ಅಂಶವಾಗಿದ್ದರ ಬಗ್ಗೆ ಇಲಾಖೆ ಜಾಗೃತಿ ಮೂಡಿಸಿ ಪ್ರೋತ್ಸಾಹಿಸಲಿದೆ ಎಂದರು.

ಪಶುವೈದ್ಯಾದಧಿಕಾರಿ ವಿಶ್ವನಟೇಶ್ ಮಾತನಾಡಿ, ಇಲಾಖೆಯಲ್ಲಿ ಬರಡು ರಾಸು ಚಿಕಿತ್ಸಾ ಕಾರ್ಯಕ್ರಮ, ರೈತರಿಗೆ ಸಾರ್ವಜನಿಕರಿಗೆ ಹಸು, ಕರುಗಳ ಪ್ರದರ್ಶನ ಪೌಷ್ಠಿಕ ರಸಮೇವು ತಯಾರಿಕೆ ಕುರಿತು ತರಬೇತಿಗಳ ಆಯೋಜನೆ ಬಗ್ಗೆ ಅಧ್ಯಯನ ಕ್ಷೇತ್ರ ಪ್ರವಾಸದ ಸೌಲಭ್ಯ ನೀಡಲಿದೆ ಎಂದರು.

ಈ ಸಂದರ್ಭದಲ್ಲಿ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಜಿ.ಶಿವಣ್ಣ ತಾಲ್ಲೂಕು ಕೃಷಿಕ ಸಮಾಜದ ಉಪಾಧ್ಯಕ್ಷೆ ಆರುಂಡಿ ಜಯಮ್ಮ, ನಿರ್ದೇಶಕರಾದ ಕೆ.ಎಸ್. ರಾಮಲಿಂಗಪ್ಪ, ರುದ್ರಾನಾಯ್ಕ್, ಬೆಳಗುತ್ತಿ ಉಮೇಶ್, ಎನ್. ಪಿ. ಕೃಷ್ಣಮೂರ್ತಿ, ಜೆ. ಬಿ. ಸುರೇಶ್, ಜೆ. ಆರ್. ಬಸವರಾಜಪ್ಪ, ಜಿ. ಎನ್. ಶಿವನಗೌಡ, ಎಂ. ಹೆಚ್. ಕುಮಾರ, ಸೋಮಶೇಖರ್ ಇನ್ನಿತರರಿದ್ದರು.

## ಉಚ್ಚಂಗಿದುರ್ಗದ ಉತ್ಸವಾಂಬೆಗೆ 371 ಕಾಯಿ ಒಡೆದು ಭಕ್ತಿ ಸಮರ್ಪಣೆ



ಹರಪನಹಳ್ಳಿ, ಮೇ 18- ಶಾಸಕರಾಗಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಗೆಲುವು ಸಾಧಿಸಿದ್ದಕ್ಕೆ ಹಾಗೂ 371 ಜೆ ನಾನು ಮಾಡಿಸಿದ್ದು ಎಂದು ಸುಳ್ಳು ಹೇಳಿದವರಿಗೆ ತಕ್ಕ ಪಾಠ ಕಲಿಸಿದ್ದಕ್ಕೆ ದಿ. ಮಾಜಿ ಶಾಸಕ ಎಂ.ಪಿ.ರವೀಂದ್ರ ಅಭಿಮಾನಿ ಬಳಗದಿಂದ ಇತಿಹಾಸ ಪ್ರಸಿದ್ದ ಉಚ್ಚಂಗಿದುರ್ಗದ ಉತ್ಸವಾಂಭ ದೇವಾಲಯದಲ್ಲಿ 371 ತೆಂಗಿನಕಾಯಿ ಒಡೆದು ದೇವಿಗೆ ಭಕ್ತಿ ಸಮರ್ಪಿಸಲಾಯಿತು.

ಪಟ್ಟಣದ ಉಪ್ಪಾರಗೇರಿಯ ಶಿಕ್ಷಕ ಮೇಘರಾಜ ಅವರ ನೇತೃತ್ವದಲ್ಲಿ ಉತ್ಸವಾಂಭ ದೇವಿಗೆ ಪೂಜೆ ಸಲ್ಲಿಸಿ ಪಾದಗಟ್ಟೆ ಬಳಿ ತೆಂಗಿನಕಾಯಿ ಒಡೆದು ಭಕ್ತಿ ಅರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿಕ್ಷಕ ಮೇಘರಾಜ ಅವರು ಹೂವಿನ ಹಡಗಲಿಯ ಮಾಜಿ ಶಾಸಕರು ಉಚ್ಚಂಗಿದುರ್ಗದಲ್ಲಿ ವಿಧಾನ ಪರಿಷತ್ತು ಚುನಾವಣಾ ಪ್ರಚಾರದಲ್ಲಿ 371 ಜೆ ಕಲ್ಪಿಸಿದ್ದು ನಾನು ಎಂದಾಗ ಮಧ್ಯ ಪ್ರವೇಶಿಸಿದ ನಾನು ನೀವಲ್ಲ, ದಿ. ಎಂ.ಪಿ.ರವೀಂದ್ರ ಎಂದು ಹೇಳಿದ್ದೆ ಹಾಗೂ ಮುಂದಿನ ಚುನಾವಣೆಯಲ್ಲಿ ಉತ್ತರ ಕೊಡು ದೇವಿ ಎಂದು ಬೇಡಿಕೊಂಡಿದ್ದೆ, ಅದರಂತೆ ದೇವಿ ಹರಪನಹಳ್ಳಿ ಹಾಗೂ ಹೂವಿನ ಹಡಗಲಿ ಕ್ಷೇತ್ರದಲ್ಲಿ ಉತ್ತರ ಕೊಟ್ಟಿದ್ದಾಳೆ ಎಂದು ಅವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮುಖಂಡರಾದ ಗುಡಿ ನಾಗರಾಜ್, ಜಕಾತಿ ಆನಂದ್, ಗುಡಿಕಟ್ಟೆಕೇರಿ ಅಂಜಿನಪ್ಪ, ಶಿಕಾರಿ ಅಂಜಿನಪ್ಪ, ಮಟ್ಟೇರಿ ಮಂಜುನಾಥ್, ಕಡಬಗೇರಿ ಕಾರ್ತಿಕ ಸೇರಿದಂತೆ ಇತರರು ಹಾಜರಿದ್ದರು.

## ಸಲೀಂ ಅಹಮದ್, ಎಸ್ಸೆಸ್ಸೆಂಗೆ ಸಚಿವ ಸ್ಥಾನ ನೀಡಲು ಆಗ್ರಹ

ದಾವಣಗೆರೆ, ಮೇ 18- ರಾಜ್ಯದ ಮುಖ್ಯಮಂತ್ರಿಯಾಗಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ಸ್ವೀಕರಿಸುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಇದರೊಟ್ಟಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಂಪುಟ ದರ್ಜೆ ಸಚಿವ ಸ್ಥಾನ ನೀಡಬೇಕೆಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಅವರು ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ವರಿಷ್ಠರನ್ನು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಹಮ್ಮದ್ ಜಿಕ್ರಿಯಾ, ಕೆ.ಜಿ. ರಹಮತ್ ಉಲ್ಲಾ, ಬಿ.ಎನ್. ವಿನಾಯಕ, ಕೆ.ಎಂ. ಮಂಜುನಾಥ್, ಬಿ.ಹೆಚ್. ಉದಯಕುಮಾರ್, ಸಂದೇಶನಾಯ್ಕ, ಬಿ.ಎಸ್. ಸುರೇಶ, ಡಿ. ಶಿವಕುಮಾರ್ ಮತ್ತಿತರರಿದ್ದರು.

## ಟಾಯ್‌ಕ್ವೊಂಡೊ ಶಿಬಿರದ ಉದ್ಘಾಟನೆ



ದಾವಣಗೆರೆ, ಮೇ 18- ವಿದ್ವಾನ್ ಟಾಯ್‌ಕ್ವೊಂಡೊ ಅಕಾಡೆಮಿ ಹಾಗೂ ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಯ ವತಿಯಿಂದ ಉಚಿತ ಟಾಯ್‌ಕ್ವೊಂಡೊ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಪ್ರಾಂಶುಪಾಲ ಸೈಯದ್ ಆರೀಫ್ ಆರ್. ಮತ್ತು ರಾಷ್ಟ್ರೀಯ ತೀರ್ಪುಗಾರರಾದ ಶ್ರೀಮತಿ ಸೌಮ್ಯರಾಣಿ ಸಿ.ಹೆಚ್. ಭಾಗವಹಿಸಿದ್ದರು. ಸೇಂಟ್ ಜಾನ್ಸ್ ಇಂಗ್ಲಿಷ್ ಮೀಡಿಯಂ ಶಾಲೆಯಿಂದ ಖಜಾಂಚಿ ಪ್ರವೀಣ್ ಹುಲ್ಲುಮನಿ ಶುಭ ಹಾರೈಸಿದರು.

## ಇಂದು ಅಮವಾಸ್ಯೆ : ನಗರದ ಶ್ರೀ ಬಸವೇಶ್ವರ, ಶ್ರೀ ದಾನಮ್ಮ ದೇವಿಗೆ ರುದ್ರಾಭಿಷೇಕ





ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಹಾಗು ಗುಡ್ಡಾಪುರದ ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಬಾದಾಮಿ ಅಮಾವಾಸ್ಯೆ ಪ್ರಯುಕ್ತ ಇಂದು ಬೆಳಿಗ್ಗೆ ರುದ್ರಾಭಿಷೇಕ, ಮಧ್ಯಾಹ್ನ ಹೂವಿನ ಅಲಂಕಾರ ಪೂಜೆ ನಡೆಯುವುದು. ನಂತರ ದಾಸೋಹ ಏರ್ಪಡಿಸಲಾಗಿದೆ. ಶ್ರೀಮತಿ ಸರೋಜ ತೋಂಟೇಶ ಮಾನ್ವಿ ಮತ್ತು ಮಕ್ಕಳು (ಗದಗ) ಇವರು ದಾಸೋಹ, ಪೂಜೆ ಸೇವೆ ಏರ್ಪಡಿಸಿದ್ದಾರೆ.

## ವಿಶ್ವಾರಾಧ್ಯ ಆಸ್ಪತ್ರೆಯಲ್ಲಿ ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ದಾವಣಗೆರೆ, ಮೇ 18- ಬಾಡಾ ಕ್ರಾಸ್ ಬಳಿ ಇರುವ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯಲ್ಲಿ ನಾಡಿದ್ದು ದಿನಾಂಕ 20 ರ ಶನಿವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ನಡೆಯಲಿದೆ ಎಂದು ಕ್ಯಾನ್ಸರ್ ಸರ್ಜನ್ ಡಾ. ಜಗದೀಶ್ ತುಬಚಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿವರಕ್ಕೆ ಸಂಪರ್ಕಿಸುವ ಮೊಬೈಲ್ ಸಂಖ್ಯೆ : 9742455516, 9480696842. ಪತ್ರಿಕಾಗೋಷ್ಠಿಯಲ್ಲಿ ಆಸ್ಪತ್ರೆಯ ಆಡಳಿತಾಧಿಕಾರಿ ರಾಘವೇಂದ್ರ, ಡಾ. ಅಜಯ್, ವಿಶ್ವಾಸ್, ಮಂಜುನಾಥ್ ಉಪಸ್ಥಿತರಿದ್ದರು.


## ಸಿದ್ದರಾಮಯ್ಯ ಪಟ್ಟಾಭಿಷೇಕ : ಸಂಭ್ರಮ



ದಾವಣಗೆರೆ, ಮೇ 18- ಹಿರಿಯ ಮುಖಂಡ ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದು, ನಗರದ ಶ್ರೀ ವೀರ ಮದಕರಿ ನಾಯಕ ವೃತ್ತದಲ್ಲಿ ಇಂದು ವಿಜಯೋತ್ಸವ ಆಚರಿಸಲಾಯಿತು.

ಮುಖಂಡ ಬಿ. ವೀರಣ್ಣ ಮಾತನಾಡಿದರು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ಡಿಶ್ ಮಂಜುನಾಥ್, ಸೊಸೈಟಿ ಮಂಜುನಾಥ್, ಆರ್. ಗೋವಿಂದ, ಹೆಚ್.ಕೆ. ಮುಶ್ರಫ್, ಸಿಲಿಂಡರ್ ಗಣೇಶ್, ಅಪ್ಪಿ, ಬಿ.ವಿ. ಪ್ರಮೋದ್ ಕುಮಾರ್, ಪರಶುರಾಮ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## 28ರಂದು ನೂತನ ಸಂಸತ್ ಭವನದ ಉದ್ಘಾಟನೆ



ನವದೆಹಲಿ, ಮೇ 18 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನವನ್ನು ಇದೇ ದಿನಾಂಕ 28ರಂದು ಉದ್ಘಾಟಿಸಲಿದ್ದಾರೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಗುರುವಾರ ಪ್ರಧಾನಿ ಭೇಟಿ ಮಾಡಿ ನೂತನ ಕಟ್ಟಡದ ಉದ್ಘಾಟನೆಗೆ ಆಹ್ವಾನಿಸಿದ್ದಾರೆ. ನೂತನ ಸಂಸತ್ ಭವನವು ಲೋಕಸಭೆಯಲ್ಲಿ 888 ಹಾಗೂ ರಾಜ್ಯಸಭೆಯಲ್ಲಿ 300 ಜನರಿಗೆ ಆಗುವಷ್ಟು ಸ್ಥಳಾವಕಾಶ ಹೊಂದಿದೆ.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಅಮಾವಾಸ್ಯೆ ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಬಾದಾಮಿ ಅಮಾವಾಸ್ಯೆಯ ವಿಶೇಷ ಪೂಜಾ ಕಾರ್ಯಕ್ರಮಗಳು ಇಂದು ನಡೆಯಲಿವೆ.

ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ, ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು. ಶ್ರೀಮತಿ ಸುಮನ ಮತ್ತು ವಾಗೀಶ್ ಕಟಗಿಹಳ್ಳಿಮಠ ಹಾಗೂ ಮಕ್ಕಳು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಯಡಿಯೂರಪ್ಪಗೆ ಹರೀಶ್ ಕೃತಜ್ಞತೆ



ಮಲೇಬೆನ್ನೂರು, ಮೇ 18- ಹರಿಹರ ಕ್ಷೇತ್ರದಿಂದ ವಿಧಾನಸಭೆಗೆ 2 ನೇ ಬಾರಿಗೆ ಆಯ್ಕೆಯಾಗಿರುವ ಬಿ.ಪಿ. ಹರೀಶ್ ಅವರು ಗುರುವಾರ ಬೆಂಗಳೂರಿನಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಕೃತಜ್ಞತೆ ಸಲ್ಲಿಸಿದರು.

## ಬಿಹಾರ ಜಾತಿ ಗಣತಿ : ಸುಪ್ರೀಂ ನಕಾರ

**(1ನೇ ಪುಟದಿಂದ)** ತಡೆಯಾಜ್ಞೆ ಪ್ರಶ್ನಿಸಿ ಬಿಹಾರ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ರಾಜ್ಯ ಸರ್ಕಾರ ಸಮೀಕ್ಷೆಯ ಹೆಸರಿನಲ್ಲಿ ಗಣತಿ ನಡೆಸುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಬಯಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಜುಲೈ 14ರಂದು ಈ ಬಗ್ಗೆ ಮುಂದಿನ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

## ಕುರುಬ ಸಮಾಜದಿಂದ ವಿಜಯೋತ್ಸವ



ದಾವಣಗೆರೆ, ಮೇ 18- ಹಿಂದುಳಿದ ವರ್ಗಗಳ ನಾಯಕ ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದು, ಜಿಲ್ಲಾ ಕುರುಬ ಸಮಾಜದ ವತಿಯಿಂದ ಇಂದು ಸಂಜೆ ನಗರದ ಜಯದೇವ ವೃತ್ತದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಮುಖಂಡರುಗಳಾದ ಕನ್ನವರ ರೇವಣ್ಣ, ಎಸ್.ಎಸ್. ಗಿರೀಶ್, ಲೋಕಿಕೆರೆ ಪ್ರದೀಪ್, ಎಚ್.ವೈ. ಶಶಿಧರ್, ಬಿ. ವೀರಣ್ಣ, ಎಂ. ಮನು, ಚಂದ್ರು ದೀಟ್ಟೂರು, ಮಾಲಾ ಹನುಮಂತಪ್ಪ, ಮಳಲಕೆರೆ ಪ್ರಕಾಶ್, ದೀಪಕ್, ಶ್ರೀನಿವಾಸ್, ಆಡನಿ ಸಿದ್ದಣ್ಣ, ಪರಮೇಶ್, ಆನಂದ್, ಕೆ.ಜಿ. ಶಿವಕುಮಾರ್, ವಿಜಯಕುಮಾರ್, ಆನೇಕಲ್ ವೀರಣ್ಣ, ಬಾಡ ರವಿ, ಶಿವಣ್ಣ ಅಡುಗೆ ಭಟ್ಟರು, ಕುಂಬಳೂರು ವಿರುಪಾಕ್ಷಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶನೇಶ್ವರ ಸ್ವಾಮಿ ಜಯಂತ್ಯೋತ್ಸವ

ಪಿ.ಬಿ. ರಸ್ತೆಯ ಕರೂರ್ ಕ್ರಾಸ್ ಬಳಿ ಇರುವ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರ ಸ್ವಾಮಿ ಜಯಂತ್ಯೋತ್ಸವ ಪ್ರಯುಕ್ತ ಇಂದು ಬೆಳಿಗ್ಗೆ 6.30 ಕ್ಕೆ ಶ್ರೀ ಶನೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವಿಶೇಷ ಅಲಂಕಾರ ನಡೆಯುವುದು. ಬೆಳಿಗ್ಗೆ 9.30 ಗಂಟೆಗೆ ತೊಟ್ಟಿಲೋತ್ಸವ ಹಾಗೂ ಶ್ರೀ ಶನೇಶ್ವರ ಸ್ವಾಮಿ ಸಹಿತ ನವಗ್ರಹ ಹೋಮ ನಂತರ ತೀರ್ಥ ಪ್ರಸಾದ ಏರ್ಪಡಿಸಲಾಗಿದೆ.

## ಭದ್ರಾ ನಾಲೆಯಲ್ಲಿ 25ರವರೆಗೆ ನೀರು ಹರಿಸುವ ಸಾಧ್ಯತೆ



**ಮೇ 30 ರವರೆಗೆ ನೀರು ಮುಂದುವರೆಸಿ : ಶಾಸಕ ಹರೀಶ್ ಒತ್ತಾಯ**

**(1ನೇ ಪುಟದಿಂದ)** ಮುಂದುವರಿಸುವ ಬಗ್ಗೆ ನೀರಾವರಿ ನಿಗಮದ ಎಂ.ಡಿ. ಅವರಿಗೆ ಪತ್ರ ಬರೆಯುತ್ತೇನೆ. ಸದ್ಯ ನಾಲೆಯಲ್ಲಿ ನೀರು ನಿಲ್ಲಿಸುವುದಿಲ್ಲ. ಅಲ್ಲಿಂದ ಯಾವ ನಿರ್ದೇಶನ ಬರುತ್ತದೆಂಬುದನ್ನು ನೋಡಿಕೊಂಡು ತೀರ್ಮಾನ ಮಾಡುತ್ತೇವೆ ಎಂದು ರೈತರಿಗೆ ತಿಳಿಸಿದರು.

ಮೂಲಗಳ ಪ್ರಕಾರ ಮೇ 25 ರವರೆಗೆ ನಾಲೆ ನೀರು ಹರಿಸುವ ಸಾಧ್ಯತೆ ಇದೆ ಎಂದು ವೈ. ದ್ಯಾವಪ್ಪ ರೆಡ್ಡಿ 'ಜನತಾವಾಣಿ'ಗೆ ಮಾಹಿತಿ ನೀಡಿದರು.

ಹೊಳೆಸಿರಿಗೆರೆಯ ರುದ್ರಪ್ಪ, ನಂದಿತಾವರೆ ಮುರುಗೇಂದ್ರಯ್ಯ, ಕೆ. ಎನ್. ಕುಮಾರ್, ನಿಟ್ಟೂರಿನ ಬಿ. ಜಿ. ಧನಂಜಯ, ಕುಣೆಬೆಳಕೆರೆ ಭೋವಿ ಅಂಜಿನಪ್ಪ, ಮಡಿವಾಳರ ಮಲ್ಲೇಶಪ್ಪ, ನಂದೀಶ್ವರ ಕ್ಯಾಂಪಿನ ಬ್ರಹ್ಮಣ್ಣ, ಭಾನುವಳ್ಳಿಯ ನಾರಾಯಣಪ್ಪ, ರಂಗನಾಥ್, ಪ್ರಶಾಂತ್ ಸೇರಿದಂತೆ ನೂರಾರು ರೈತರು ನಿಯೋಗದಲ್ಲಿದ್ದರು.

**ಹರೀಶ್ ಒತ್ತಾಯ :** ಭದ್ರಾ ಬಲದಂಡೆ ನಾಲೆಯಲ್ಲಿ ಮೇ 30 ರವರೆಗೆ ನೀರು ಮುಂದುವರಿಸುವಂತೆ ಹರಿಹರ ಕ್ಷೇತ್ರದ ಶಾಸಕ ಬಿ.ಪಿ. ಹರೀಶ್ ಅವರು ಗುರುವಾರ ಭದ್ರಾ ಎಸ್‌ಇ ಮತ್ತು ಸಿಇಗೆ ಒತ್ತಾಯಿಸಿದ್ದಾರೆ.

ಅಚ್ಚುಕಟ್ಟಿನ ಕೊನೆಯ ಭಾಗದಲ್ಲಿ ಭತ್ತದ ಬೆಳೆ ಕಾಳು ಕಟ್ಟುವ ಹಂತದಲ್ಲಿದ್ದು, ಈಗ ನೀರು ನಿಲ್ಲಿಸುವುದರಿಂದ ಸಾವಿರಾರು ರೈತರ ಬೆಳೆಹಾನಿಯಾಗಿ ಕೋಟ್ಯಾಂತರ ರೂಪಾಯಿ ನಷ್ಟವಾಗಲಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ನಾಲೆಯಲ್ಲಿ ನೀರು ಬಂದ್ ಮಾಡದೇ ಮೇ 30 ರವರೆಗೆ ನೀರು ಮುಂದುವರೆಸುವಂತೆ ಪತ್ರ ಮುಖೇನ ಹರೀಶ್ ಒತ್ತಾಯಿಸಿದ್ದಾರೆ.

## ಹುಲ್ಲತ್ತಿ ನೀಲಮ್ಮ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, 7ನೇ ಮೇನ್ ವಾಸಿ **ಕಕ್ಕರಗೊಳ್ಳದ ದಿ. ಹುಲ್ಲತ್ತಿ ಭರಮಪ್ಪ** ಇವರ ಧರ್ಮಪತ್ನಿ

**ಶ್ರೀಮತಿ ನೀಲಮ್ಮ**

ಇವರು ದಿನಾಂಕ : 18.5.2023ರ ಗುರುವಾರ ರಾತ್ರಿ 11.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.5.2023ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ : 99169 57912, 98863 66441**

## ಚಿರಸ್ಮರಣೆ



*ನೀವು ನಮ್ಮನ್ನಗಲಿ ಇಂದಿಗೆ 17 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...*

**ದಿ|| ಶ್ರೀ ಎಂ.ವೀರಣ್ಣ ಸೊಸೈಟಿ**
**ನಿಧನ : 18.05.2006**

ಧರ್ಮಪತ್ನಿ : **ಶ್ರೀಮತಿ ಪುಷ್ಪಲತಾ ವಿ.**
ಮಕ್ಕಳು : **ಶ್ರೀಮತಿ ಸುಮಿತ್ರ ಮತ್ತು ಜಯಣ್ಣ ಮಂಜುನಾಥ್ ವಿ. (ಸೊಸೈಟಿ), ಆನಂದ್ ಕುಮಾರ್ ವಿ. ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## ಕುರುಬ ಸಮಾಜಕ್ಕೆ ಮೂರು ಸಚಿವ ಸ್ಥಾನ ನೀಡಲು ಒತ್ತಾಯ

ದಾವಣಗೆರೆ, ಮೇ 18- ಅಹಿಂದ ನಾಯಕ ಸಿದ್ಧರಾಮಯ್ಯ ಅವರಿಗೆ ಪೂರ್ಣಾವಧಿ ಮುಖ್ಯಮಂತ್ರಿ ಸ್ಥಾನ ನೀಡಬೇಕು. ಕುರುಬ ಸಮಾಜದ ಶಾಸಕರಲ್ಲಿ ಮೂವರಿಗೆ ಸಚಿವ ಸ್ಥಾನ ನೀಡಬೇಕು. ಜಿಲ್ಲೆಯ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸಂಪುಟ ದರ್ಜೆ ಸ್ಥಾನ ನೀಡಬೇಕೆಂದು ಹಾಲುಮತ ಮಹಾಸಭಾ ಜಿಲ್ಲಾಧ್ಯಕ್ಷ ಹಾಲೇಕಲ್ ಸಿ. ವೀರಣ್ಣ, ಕಾರ್ಯಾಧ್ಯಕ್ಷ ದೀಟೂರು ಚಂದ್ರು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹಾಲುಮತ ಮಹಾಸಭಾದ ಕಾರ್ಯದರ್ಶಿ ಎಸ್.ಎಂ. ಸಿದ್ಧಲಿಂಗಪ್ಪ, ಖಜಾಂಚಿ ಆರ್.ಬಿ. ಪರಮೇಶ್, ಉಪಾಧ್ಯಕ್ಷ ಜಿ. ಷಣ್ಮುಖಪ್ಪ, ಸುರೇಶ್ ಉಪಸ್ಥಿತರಿದ್ದರು.

## ಗಂಗನರಸಿಯಲ್ಲಿ ಇಂದು ಅಮಾವಾಸ್ಯೆ ಪೂಜೆ

ಹರಿಹರ ತಾಲ್ಲೂಕಿನ ಗಂಗನರಸಿಯ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ಹೊರಮಠ ಹಾಗೂ ಶ್ರೀ ಹನುಮಂತ ದೇವರ ಜೀರ್ಣೋದ್ಧಾರ ಸಮಿತಿ ವತಿಯಿಂದ ಇಂದು ಅಮಾವಾಸ್ಯೆಯ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 11 ಗಂಟೆಗೆ ಶ್ರೀ ಗೋಣಿ ಬಸವೇಶ್ವರ ಹಾಗೂ ನಾಗದೇವತಾ ಸ್ವಾಮಿಗಳಿಗೆ ಅಮಾವಾಸ್ಯೆಯ ವಿಶೇಷ ಪೂಜೆ, ಅಭಿಷೇಕ ಮತ್ತು ಮಹಾಮಂಗಲಾರತಿ ನಡೆಯುವುದು.

ನಂತರ 11.30 ಕ್ಕೆ ಮಹಾ ಪ್ರಸಾದ ಸೇವೆಯನ್ನು ಹರಿಹರದ ಹಳ್ಳಿಕೇರಿಯ ದ್ವಾವಜ್ಜರ ಹನುಮಂತಪ್ಪ, ಶ್ರೀಮತಿ ಬಸಮ್ಮ ಮಕ್ಕಳಾದ ಮಹದೇಶಿ, ತಿಪ್ಪೇಶಿಯವರು ಏರ್ಪಡಿಸಿರುವರು ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

## ಆವರಗೆರೆ ಬಳಿ ಇಬ್ಬರು ಗಂಡಸರ ಶವ ಪತ್ತೆ

ದಾವಣಗೆರೆ, ಮೇ 18- ಆವರಗೆರೆ ಗೋ ಶಾಲೆ ಹತ್ತಿರ ಪಾಳು ಬಿದ್ದಿರುವ ಶಕುರೆ ಮುಳ್ಳು ತಂತಿ ತಯಾರಿಕಾ ಘಟಕದ ಬಳಿ ಇಬ್ಬರು ಅಪರಿಚಿತ ಗಂಡಸರ ಶವಗಳು ಪತ್ತೆಯಾಗಿವೆ. ಇಬ್ಬರೂ ವ್ಯಕ್ತಿಗಳ ಶವಗಳು ಮೊನ್ನೆ ಕಂಡುಬಂದಿವೆ. ಎರಡೂ ಕೊಳೆತ ಸ್ಥಿತಿಯಲ್ಲಿವೆ. ಅಂದಾಜು 40-50 ವಯಸ್ಸಿನ, ಮೈ ಮೇಲೆ ನೇರಳೆ ಬಣ್ಣದ ಬಿಳಿ ಚಕ್ಸ್ ಅಡ್ಡ ಪಟ್ಟಿಗಳಿರುವ ಸ್ವೆಟ್ಟರ್ ಮತ್ತು ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಇರುತ್ತದೆ.

ಇನ್ನೊಂದು ಶವ ಅಂದಾಜು 30-40 ವಯಸ್ಸಿನದಾಗಿದ್ದು, ಮಾಸಲು ಬಣ್ಣದ ಟೀ ಶರ್ಟ್ ಧರಿಸಿದ್ದು, ಶರ್ಟ್‌ನ ಎಡಭಾಗದಲ್ಲಿ 'ಕನ್ನಡ ಸಂಘ' ಎಂಬ ಹೆಸರಿದೆ. ಇತರೆ ಅಕ್ಷರಗಳು ಸ್ಪಷ್ಟವಾಗಿ ಕಾಣುತ್ತಿಲ್ಲ. ಮೇಲ್ಕಂಡ ಚಹರೆಯುಳ್ಳ ವ್ಯಕ್ತಿಗಳ ವಿಳಾಸದ ಬಗ್ಗೆ ಮಾಹಿತಿ ದೊರೆತಲ್ಲಿ, ಸಿಪಿಐ ಆಜಾದ್ ನಗರ ವೃತ್ತ, ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಗೆ (08192259337, 9480803248 & 08192 272008) ಮಾಹಿತಿ ನೀಡಬಹುದು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕೊಲಂಬಿಯಾದಲ್ಲಿ ಮಾದಕ ಹಿಪ್ಪೋಗಳ ಹಾವಳಿ

ಬೊಗೊಟಾ, ಮೇ 18 - ಕೊಲಂಬಿಯಾದ ಕುಖ್ಯಾತ ಮಾದಕ ಕಳ್ಳಸಾಗಣೆದಾರ ಪ್ಯಾಬ್ಲೊ ಎಸ್ಕೋಬಾರ್ ಬದುಕಿದ್ದಾಗ ವಿಶ್ವದಾದ್ಯಂತ ಕುಖ್ಯಾತನಾಗಿದ್ದ. ಎಸ್ಕೋಬಾರ್ ಸತ್ತು ಮೂರು ದಶಕಗಳ ನಂತರ, ಆತ ಸಾಕಿದ್ದ ಹಿಪ್ಪೋಗಳು ಹಾವಳಿ ಎಬ್ಬಿಸುತ್ತಿವೆ. ಇವುಗಳನ್ನು ಜನರು 'ಮಾದಕ ಹಿಪ್ಪೋ'ಗಳು ಎಂದೇ ಕರೆಯುತ್ತಿದ್ದಾರೆ.



ಹಿಪ್ಪೋಪೊಟಮಸ್‌ಗಳು ತೀವ್ರ ದಾಳಿಕೋರ ಸ್ವಭಾವದವು. 1980ರ ಸಮಯದಲ್ಲಿ ಎಸ್ಕೋಬಾರ್, ಅಮೆರಿಕದಿಂದ ನಾಲ್ಕು ಹಿಪ್ಪೋಗಳನ್ನು ಕಳ್ಳಸಾಗಣೆಯಿಂದ ತರಿಸಿದ್ದ. 1993ರಲ್ಲಿ ಆತನ ಸಾವಿನ ನಂತರ ಇವು ತಪ್ಪಿಸಿಕೊಂಡಿದ್ದವು. ಈಗ ಮಗ್ಡಲೆನಾ ನದಿಯ ಉದ್ದಕ್ಕೂ ಹಿಪ್ಪೋಗಳ ಸಂತತಿ ಬೆಳೆದಿದೆ. ಅವುಗಳ ಸಂಖ್ಯೆ 130ಕ್ಕೆ ತಲುಪಿದೆ. ಹೀಗೆಯೇ ಬಿಟ್ಟರೆ ಇನ್ನೊಂದು ದಶಕದಲ್ಲಿ ಅವುಗಳ ಸಂಖ್ಯೆ ಸಾವಿರ ದಾಟುವ ಅಂದಾಜಿದೆ.

ಎಸ್ಕೋಬಾರ್ ಹಿಪ್ಪೋ ಅಷ್ಟೇ ಅಲ್ಲದೇ, ಘೇಂಡಾಮೃಗ, ಆನೆ, ಜಿರಾಫೆ, ಆಸ್ಟ್ರಿಚ್ ಸೇರಿದಂತೆ ಹಲವು ವನ್ಯಜೀವಿಗಳನ್ನು ಕಳ್ಳಸಾಗಣೆ ಮೂಲಕ ತರಿಸಿದ್ದ. ಆತನ ಸಾವಿನ ನಂತರ ಉಳಿದೆಲ್ಲ ಪ್ರಾಣಿಗಳನ್ನು ಮೃಗಾಲಯಗಳಿಗೆ ರವಾನಿಸಲಾಯಿತು. ಆದರೆ, ಹಿಪ್ಪೋಗಳು ಮಾತ್ರ ತಪ್ಪಿಸಿಕೊಂಡವು.

ಆಫ್ರಿಕಾದಲ್ಲಿ ಬರ ಪರಿಸ್ಥಿತಿ ಕಾರಣದಿಂದ ಹಿಪ್ಪೋಗಳ ಸಂಖ್ಯೆ ನಿಯಂತ್ರಣದಲ್ಲಿದೆ. ಅಲ್ಲದೇ, ಕೊಲಂಬಿಯಾ ಹಿಪ್ಪೋಗಳ ಬೆಳವಣಿಗೆಗೆ ಉತ್ತಮ ವಾತಾವರಣ ಹೊಂದಿದೆ. ಅಲ್ಲದೇ, ಹಿಪ್ಪೋ ಬೇಟೆ ಆಡುವ ಪ್ರಾಣಿಗಳೂ ಇಲ್ಲಿಲ್ಲ.

ಈ ಹಿಪ್ಪೋಗಳು ಜನರ ಮೇಲೆ ದಾಳಿ ನಡೆಸುತ್ತಿವೆ. ಸೂಕ್ಷ್ಮ ವಾತಾವರಣದ ಮೇಲೆ ಪರಿಣಾಮ ಬೀರುತ್ತಿವೆ. ಹಿಪ್ಪೋಗಳ ಕಳ್ಳಸಾಗಣೆದಾರರೂ ಹುಟ್ಟಿಕೊಂಡಿದ್ದಾರೆ. ಇವುಗಳ ನಿಯಂತ್ರಣ ಹಾಗೂ ನಿರ್ವಹಣೆ ಈಗ ಕೊಲಂಬಿಯಾಗೆ ಹೊಸ ಸವಾಲಾಗಿದೆ.

ಹಿಪ್ಪೋಗಳು ದಿನಕ್ಕೆ 50 ಕೆಜಿಯಷ್ಟು ಆಹಾರ ತಿನ್ನುತ್ತವೇ. ದೊಡ್ಡ ಪ್ರಮಾಣದ ತ್ಯಾಜ್ಯವನ್ನು ನದಿಗಳಲ್ಲಿ ವಿಸರ್ಜಿಸುತ್ತವೆ. ಇದರಿಂದ ನದಿಗಳ ಸ್ವರೂಪ ಬದಲಾಗುತ್ತಿದೆ. ಮೀನುಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಕಳವಳ ಇದೆ.

2009ರಲ್ಲಿ ಕೊಲಂಬಿಯಾದ ಪರಿಸರ ಸಂಸ್ಥೆಯು ಬೆಳೆ ಹಾನಿ ಮಾಡುತ್ತಿದ್ದ ಹಾಗೂ ಮನುಷ್ಯರಿಗೆ ಅಪಾಯಕಾರಿಯಾಗಿದ್ದ ಮೂರು ಹಿಪ್ಪೋಗಳನ್ನು ಕೊಲ್ಲಲು ಆದೇಶಿಸಿತ್ತು. ಪೆಪೆ ಎಂದು ಹೆಸರಾಗಿದ್ದ ಹಿಪ್ಪೋ ಕೊಂದ ಚಿತ್ರಗಳು ಜಾಗತಿಕವಾಗಿ ಪ್ರಕಟವಾಗಿ, ಟೀಕೆಗೆ ಕಾರಣವಾಗಿತ್ತು. ನಂತರ ಹಿಪ್ಪೋ ಹತ್ಯೆಯ ವಿಷಯ ಅಲ್ಲಿಗೇ ಕೈ ಬಿಡಲಾಯಿತು.

ನಂತರ ಹಿಪ್ಪೋಗಳನ್ನು ಮತ್ತು ಭರಿಸಿ ಕೊಲ್ಲುವ, ಮೃಗಾಲಯಗಳಿಗೆ ಸ್ಥಳಾಂತರಿಸುವ ಇಲ್ಲವೇ ವಿದೇಶಗಳಿಗೆ ರವಾನಿಸುವ ಮತ್ತು ಸಂತಾನ ಶಕ್ತಿ ಹರಣಗೊಳಿಸುವ ಬಗ್ಗೆ ಚಿಂತನೆ ನಡೆಸಲಾಯಿತು.

ಹಿಪ್ಪೋಗಳ ಕೊಲ್ಲುವ ಬಗ್ಗೆ ತೀವ್ರ ಆಕ್ಷೇಪವಿತ್ತು. ದಾಳಿಕೋರ ಹಿಪ್ಪೋಗಳನ್ನು ಬೇರೆ ದೇಶಗಳಿಗೆ ಸ್ಥಳಾಂತರಿಸುವುದು ಸುಲಭವಾಗಿರಲಿಲ್ಲ. ಹೀಗಾಗಿ ಸಂತಾನ ಶಕ್ತಿ ಹರಣದ ಬಗ್ಗೆ ಒಲವು ವ್ಯಕ್ತವಾಗಿತ್ತು. ಆದರೆ, ಕಾಡಿನಲ್ಲಿರುವ ಹಿಪ್ಪೋಗಳನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸುವುದು ಕಠಿಣ ಕಾರ್ಯವಾಗಿ ಪರಿಣಮಿಸಿತು. ಅಲ್ಲದೇ, ಪ್ರತಿಯೊಂದು ಹಿಪ್ಪೋಗೆ ಶಸ್ತ್ರಚಿಕಿತ್ಸೆ ಮಾಡಲು 50 ಸಾವಿರ ಡಾಲರ್ ಅಗತ್ಯವಿತ್ತು. ಇಷ್ಟೊಂದು ಹಣವನ್ನು ಸರ್ಕಾರ ಒದಗಿಸಿರಲಿಲ್ಲ.

ಈಗಲೂ ಸರ್ಕಾರ ಯಾವುದೇ ಕ್ರಮ ತೆಗೆದು ಕೊಳ್ಳದೇ ಇದ್ದರೆ, 2035ರ ವೇಳೆಗೆ ಹಿಪ್ಪೋಗಳ ಸಂಖ್ಯೆ ಸಾವಿರ ದಾಟಲಿದೆ. ಹಿಪ್ಪೋಗಳ ಸಂತಾನಶಕ್ತಿ ಹರಣಕ್ಕೆ ಈಗ ಮುಂದಾದರೂ, ನಿಯಂತ್ರಣಕ್ಕೆ 45 ವರ್ಷಗಳೇ ಬೇಕಾಗಲಿವೆ ಎನ್ನಲಾಗುತ್ತಿದೆ.

ಒಟ್ಟಾರೆ ಮಾದಕ ಕಳ್ಳಸಾಗಣೆದಾರನ ಒಂದು ಸಣ್ಣ ಕೃತ್ಯ ದಶಕಗಳ ನಂತರ ಕೊಲಂಬಿಯಾಗೆ ದೊಡ್ಡ ಸಮಸ್ಯೆಯಾಗುತ್ತಿದೆ. ಎಸ್ಕೋಬಾರ್ ಹೆಸರನ್ನು ಆತನ ಹಿಪ್ಪೋಗಳು ಮತ್ತೆ ಮತ್ತೆ ನೆನಪಿಸುತ್ತಿವೆ.


### 2 ಶತಕೋಟಿ ಡಾಲರ್ ಇಲಿ ಪಾಲು

ಪ್ಲಾಬ್ಲೋ ಎಸ್ಕೋಬಾರ್ ಹರಡಿದ್ದ ಮಾದಕ ಜಾಲ ಎಷ್ಟು ವಿಶಾಲವಾಗಿತ್ತು ಎಂದರೆ, ಆತನ ಸಾವಿನ ಸಮಯದಲ್ಲಿ 70 ಶತಕೋಟಿ ಡಾಲರ್ ಆಸ್ತಿ ಹೊಂದಿದ್ದ. ಆತ ವಿಶ್ವದ ಮೊದಲ ಹತ್ತು ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬ ಎಂದು ಗುರುತಿಸಲಾಗಿತ್ತು.

ಆತನ ಬಳಿ ಎಷ್ಟೊಂದು ಡಾಲರ್ ಇತ್ತು ಎಂದರೆ, ಅದನ್ನು ಕಾಪಾಡಿಕೊಳ್ಳುವುದೇ ಸವಾಲಾಗಿತ್ತು. ಕೆಲ ವರದಿಗಳ ಪ್ರಕಾರ, ಪ್ರತಿ ವರ್ಷ ಆತನ 2.1 ಶತಕೋಟಿ ಡಾಲರ್ (ಸುಮಾರು 16 ಸಾವಿರ ಕೋಟಿ ರೂ.) ಮೌಲ್ಯದ ನೋಟುಗಳು ಇಲಿ, ಹೆಗ್ಗಣಗಳ ಪಾಲಾಗುತ್ತಿದ್ದವು!

## ಜಿಲ್ಲಾ ಜೆಡಿಎಸ್‌ನಿಂದ ಹೆಚ್.ಡಿ. ದೇವೇಗೌಡರ ಜನ್ಮದಿನಾಚರಣೆ

ದಾವಣಗೆರೆ,ಮೇ 18- ಜಿಲ್ಲಾ ಜೆಡಿಎಸ್ ವತಿಯಿಂದ ಮಾಜಿ ಶಾಸಕ ಎಚ್.ಎಸ್.ಶಿವಶಂಕರ್ ಅವರ ಗೃಹ ಕಚೇರಿಯಲ್ಲಿ ಇಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ 91ನೇ ಜನ್ಮದಿನ ಆಚರಿಸಲಾಯಿತು.



ಪಕ್ಷದ ಜಿಲ್ಲಾ ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ ಮಾತನಾಡಿ, ಸೀಮಿತ ಕಾಲಾವಧಿಗೆ ಮಾತ್ರ ಪ್ರಧಾನಿ ಹುದ್ದೆ ಅಲಂಕರಿಸಿದ ದೇವೇಗೌಡರು ಜನಮಾನಸದಲ್ಲಿ ಇರುವಂತಹ ಕೆಲಸ ಮಾಡಿದ್ದರು. ಆಗ ನೀರಾವರಿ ವ್ಯವಸ್ಥೆಗಳ ಕ್ರಾಂತಿಗಯೇ ನಡೆಯಿತು. ದೇವೇಗೌಡರ ಮೇಲಿನ ಅಭಿಮಾನದಿಂದ ಪಂಜಾಬ್‌ನಲ್ಲಿ ಒಂದು ಭತ್ತದ ತಳಿಗೆ ದೇವೇಗೌಡ ಎಂದು ಹೆಸರು ನಾಮಕರಣ ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಬಾತಿ ಶಂಕರ್, ರೇಖಾ ಸಿಂಗ್, ಗಾಯತ್ರಿ ಹಾಲೇಶ್, ಅಮರೇಶ್, ಕಡತಿ ಆಂಜಿನಪ್ಪ, ಚಂದ್ರಪ್ಪ, ಕಿರಣ್ ಕುಮಾರ್, ಮೌನೇಶ್, ಉಮೇಶ್, ಚಂದ್ರು, ಶ್ರೀನಿವಾಸ್, ಫಕ್ರುದ್ದೀನ್ ದೊಡ್ಮನಿ ಇತರರು ಹಾಜರಿದ್ದರು.

# ಬೇಸಿಗೆ ಶಿಬಿರದಿಂದ ಹೊಸ ಸ್ನೇಹ-ಸಂತೋಷ




### ಬೇಸಿಗೆ ಶಿಬಿರ ಉದ್ಘಾಟಿಸಿದ ಜಿ.ಪಂ. ಸಿಇಓ ಹಿಟ್ನಾಳ್

ದಾವಣಗೆರೆ, ಮೇ 18- ಮಕ್ಕಳು ಇತರೆ ಮಕ್ಕಳೊಂದಿಗೆ ಬೆರೆತು ಹೊಸ ಸ್ನೇಹ ಸಂಪಾದಿಸುವುದು ಹಾಗೂ ವಿವಿಧ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸಂತೋಷವಾಗಿರಲು ಬೇಸಿಗೆ ಶಿಬಿರಗಳಿಂದ ಸಾಧ್ಯ ಎಂದು ಜಿ.ಪಂ ಸಿಇಓ ಸುರೇಶ್ ಹಿಟ್ನಾಳ್ ತಿಳಿಸಿದರು.

ಸ್ಥಳೀಯ ಜೆ.ಹೆಚ್.ಪಟೇಲ್ ನಗರದಲ್ಲಿ ಇರುವ ಜಿಲ್ಲಾ ಬಾಲಭವನದಲ್ಲಿ 6 ರಿಂದ 16 ವರ್ಷದ ಮಕ್ಕಳಿಗಾಗಿ ಏರ್ಪಡಿಸಿರುವ ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ರಜಾ ದಿನಗಳನ್ನು ಸ್ನೇಹಿತರೊಂದಿಗೆ ಕಳೆಯದೇ ಮೊಬೈಲ್‌ನಲ್ಲಿ ಗೇಮ್ಸ್ ಆಡುವುದರ ಮುಖಾಂತರ ಕಳೆಯುತ್ತಿದ್ದು, ಇದರಿಂದ ಮಕ್ಕಳಿಗೆ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳಲು ಅವಕಾಶ ದೊರೆಯುತ್ತಿಲ್ಲ. ಆದಕಾರಣ ಮಕ್ಕಳು ಬೇಸಿಗೆ ಶಿಬಿರದಲ್ಲಿ ಅತ್ಯಂತ ಚಟುವಟಿಕೆಯಿಂದ ಭಾಗವಹಿಸಿ ಒಳ್ಳೆಯ ಸವಿನೆನಪುಗಳೊಂದಿಗೆ ಶಾಲೆಗೆ ಮರಳಬೇಕೆಂದು ಕಿವಿಮಾತು ಹೇಳಿದರು.

ಮುಖ್ಯ ಅಥಿತಿಯಾಗಿ ಭಾಗವಹಿಸಿದ್ದ ಶ್ರೀಮತಿ ಯಶಾ ದಿನೇಶ್ ಮಾತನಾಡಿ, ಎಲ್ಲಾ ಮಕ್ಕಳಲ್ಲಿ ಒಂದಲ್ಲಾ ಒಂದು ಪ್ರತಿಭೆ ಇದ್ದು, ಮಕ್ಕಳ ಪ್ರತಿಭೆಯನ್ನು ಹೊರತರಲು ಹಾಗೂ ಹೊರತಂದ ಪ್ರತಿಭೆಯನ್ನು ಪೋಷಿಸಿ ಹೆಚ್ಚಿನ ಮಟ್ಟದಲ್ಲಿ ಬೆಳೆಸಲು ಬೇಸಿಗೆ ಶಿಬಿರಗಳು ಉತ್ತಮ ವೇದಿಕೆಯಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಕಾರ್ಯದರ್ಶಿ ಎಂ.ಗುರುಸಿದ್ದಸ್ವಾಮಿ, ರಾಮಚಂದ್ರ ಶೆಟ್ರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರಸನ್ನ ಕುಮಾರ್, ಕೋ-ಆರ್ಡಿನೇಟರ್ ಶ್ರೀಮತಿ ಮಾಲತಿ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ. ಎನ್.ಬಿ.ಲೀಲಾ, ಶ್ರೀಮತಿ ಡಿ.ಕೆ.ಲಕ್ಷ್ಮಿ ಮತ್ತಿತರರು ಹಾಜರಿದ್ದರು.

## ಸಿದ್ದರಾಮಯ್ಯ ನನ್ನ ಬಾಸ್ ಅಲ್ಲ : ಡಿಕೆಶಿ

(1ನೇ ಪುಟದಿಂದ) ಹೊಂದಿದ್ದೇನೆ. ಈ ಹಿಂದೆ ಎಸ್. ಬಂಗಾರಪ್ಪ, ಎಸ್.ಎಂ. ಕೃಷ್ಣ ಹಾಗೂ ಹೆಚ್.ಡಿ. ಕುಮಾರಸ್ವಾಮಿ ಅವರ ಕೆಳಗೆ ಕೆಲಸ ಮಾಡಿದ್ದೇನೆ. ಕುಮಾರಸ್ವಾಮಿ ನನ್ನ ಸಹೋದ್ಯೋಗಿ. ಬಂಗಾರಪ್ಪ ಹಾಗೂ ಕೃಷ್ಣ ಅವರನ್ನು ನಾಯಕರೆಂದು ಒಪ್ಪಿಕೊಳ್ಳುತ್ತೇನೆ ಎಂದೂ ಶಿವಕುಮಾರ್ ಹೇಳಿದರು. ಕರ್ನಾಟಕದಲ್ಲೂ ರಾಜಸ್ಥಾನ ಕಾಂಗ್ರೆಸ್ ರೀತಿಯಲ್ಲೇ ಭಿನ್ನಮತ ಉಂಟಾಗಲಿದೆ ಎಂಬ ಕಳವಳ ತಳ್ಳಿ ಹಾಕಿರುವ ಶಿವಕುಮಾರ್, ನನ್ನ ವರ್ಚಸ್ಸು ಹಾಗೂ ತೃಪ್ತಿ ಕಳೆದುಕೊಳ್ಳಲು ತಯಾರಿಲ್ಲ. ದೂರಿಗೆ ಅವಕಾಶ ಕೊಡುವುದಿಲ್ಲ. ನನ್ನದೇನಿದ್ದರೂ ನೇರ ಹೋರಾಟ ಎಂದು ಹೇಳಿದರು.


## ಉಪಮುಖ್ಯಮಂತ್ರಿ ಬೇಕೆಂದ ಪರಮೇಶ್ವರ್

(1ನೇ ಪುಟದಿಂದ) ರೀತಿ ಪ್ರಾತಿಧ್ಯ ಕಲ್ಪಿಸಬೇಕು ಎಂಬುದನ್ನು ಹೈಕಮಾಂಡ್ ನಿರ್ಧರಿಸಬೇಕಿದೆ ಎಂದರು. ನಾವು ಶಿಸ್ತಿನ ಸಿಪಾಯಿಗಳು. ಲಾಬಿ ಹಾಗೂ ಗಲಾಟೆಯ ಅಗತ್ಯವಿಲ್ಲ ಎಂದು ಭಾವಿಸಿದ್ದೇವೆ. ನಮಗೆ ಹೈಕಮಾಂಡ್ ಮೇಲೆ ವಿಶ್ವಾಸ ಇದೆ. ಯಾವ ಸಮುದಾಯ ಪಕ್ಷದ ಜೊತೆ ಗುರುತಿಸಿಕೊಂಡಿದೆ, ಯಾವ ಕಾರಣಕ್ಕಾಗಿ ಇಷ್ಟು ಸ್ಥಾನ ಬಂದಿವೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುವುದು ಸೂಕ್ತ ಎಂದು ಪರಮೇಶ್ವರ್ ಹೇಳಿದರು.

# ಕಾಂಗ್ರೆಸ್ ಸಮಸ್ಯೆ ನಿವಾರಕನಿಗೆ ಡಿಸಿಎಂ ಹುದ್ದೆ

## ತೀವ್ರ ಪ್ರಯತ್ನದ ನಂತರವೂ ಒಲಿಯದ ಮುಖ್ಯಮಂತ್ರಿ ಗಾದಿ

ಬೆಂಗಳೂರು, ಮೇ 18 – ಕಾಂಗ್ರೆಸ್ ಪಕ್ಷದ 'ಟ್ರಬಲ್ ಶೂಟರ್' ಎಂದೇ ಹೆಸರಾಗಿರುವ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸ್ಥಾನದ ಅಡ್ಡಿಗಳನ್ನು ನಿವಾರಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.



ಮೇ 10ರಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ 135 ಸ್ಥಾನ ಗಳಿಸಿದೆ. ಈ ಸಾಧನೆಯ ಆಧಾರದ ಮೇಲೆ ಮುಖ್ಯಮಂತ್ರಿ ಗಾದಿ ಕೊಡುವಂತೆ ಶಿವಕುಮಾರ್ ಹೈಕಮಾಂಡ್ ಬಳಿ ಕೇಳಿದ್ದರು.

ಕನಕಪುರದ ಬಂಡೆ ಎಂದೇ ಹೆಸರಾಗಿರುವ ಶಿವಕುಮಾರ್ ಅವರ ಸಂಘಟನಾ ಚತುರತೆ ಹೈಕಮಾಂಡ್‌ನ ಮೆಚ್ಚುಗೆಗೂ ಪಾತ್ರವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬಿರುಸಿನ ಪ್ರಚಾರಕ್ಕೆ ಸವಾಲು ಹಾಕಿ ಕಾಂಗ್ರೆಸ್ ಅನ್ನು ಗೆಲುವಿನ ದಡಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಶಿವಕುಮಾರ್, ಈಗ ಉಪ ಮುಖ್ಯಮಂತ್ರಿ ಹುದ್ದೆಗೆ ತೃಪ್ತಿಪಟ್ಟುಕೊಳ್ಳಬೇಕಿದೆ.

ಮಹಾರಾಷ್ಟ್ರದ ಆಗಿನ ಮುಖ್ಯಮಂತ್ರಿ ದಿವಂಗತ ವಿಲಾಸರಾವ್ ದೇಶಮುಖ್ ಅವರು ವಿಶ್ವಾಸ ಮತದ ಸಮಸ್ಯೆ ಎದುರಿಸಿದಾಗ ಮತ್ತು ಗುಜರಾತ್‌ನಿಂದ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅಹಮದ್ ಪಟೇಲ್ ಸಮಸ್ಯೆ ಎದುರಿಸಿದಾಗ ನೆರವಾಗಿದ್ದು ಶಿವಕುಮಾರ್.

ದೇಶಮುಖ್ ಸರ್ಕಾರ ಸಂಕಷ್ಟಕ್ಕೆ ಸಿಲುಕಿದಾಗ ಶಿವಕುಮಾರ್ ಅವರು ಮಹಾರಾಷ್ಟ್ರದ ಶಾಸಕರನ್ನು ಬೆಂಗಳೂರು ಹೊರ ವಲಯದ ರೆಸಾರ್ಟ್‌ನಲ್ಲಿ ಒಂದು ವಾರ ಕಾಲ ಇರಿಸಿದ್ದರು. ಅವರು ದೇಶಮುಖ್ ಸರ್ಕಾರ ಉಳಿಸಲು ನೆರವಾಗಿದ್ದರು.

ಅಹಮದ್ ಪಟೇಲ್ 2017ರಲ್ಲಿ ಗುಜರಾತ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗುವಂತೆ ಮಾಡುವಲ್ಲಿಯೂ ಶಿವಕುಮಾರ್ ಮಹತ್ವದ ಪಾತ್ರ ವಹಿಸಿದ್ದರು. ಆಗಲೂ ಗುಜರಾತ್‌ನ ಕಾಂಗ್ರೆಸ್ ಶಾಸಕರನ್ನು ರೆಸಾರ್ಟ್‌ನಲ್ಲಿ ಇರಿಸಲಾಗಿತ್ತು.

2018ರಲ್ಲಿ ಜಾರಿ ನಿರ್ದೇಶನಾಲಯ ಶಿವಕುಮಾರ್ ವಿರುದ್ಧ ಅಕ್ರಮ ಹಣ ಪ್ರಕರಣ ದಾಖಲಿಸಿತ್ತು. ನಂತರ ಆದಾಯ ತೆರಿಗೆ ಇಲಾಖೆಯ ಪ್ರಕರಣವೂ ಸುತ್ತಿಕೊಂಡಿತ್ತು. ಆದಾಯ ತೆರಿಗೆ ಹಾಗೂ ಜಾರಿ ನಿರ್ದೇಶನಾಲಯಗಳ ಸರಣಿ ದಾಳಿಗಳು ನಡೆದವು.

ಸೆಪ್ಟೆಂಬರ್ 3, 2019ರಂದು ಅವರು ಜಾರಿ ನಿರ್ದೇಶನಾಲಯದ ಬಂಧನಕ್ಕೂ ಒಳಗಾಗಬೇಕಾಯಿತು. ಶಿವಕುಮಾರ್ ಅವರು ರಾಜ್ಯದ ಮೂರನೇ ಅತ್ಯಂತ ಶ್ರೀಮಂತ ಅಭ್ಯರ್ಥಿಯಾಗಿದ್ದಾರೆ. ಅವರ ಆಸ್ತಿ ಮೌಲ್ಯ 1,413 ಕೋಟಿ ರೂ. ಎಂದು ಚುನಾವಣಾ ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

1962ರ ಮೇ 15ರಂದು ಕನಕಪುರದ ದೊಡ್ಡಾಲಹಳ್ಳಿ ಕೆಂಪೇಗೌಡ ಹಾಗೂ ಗೌರಮ್ಮ ದಂಪತಿಗೆ ಅವರು ಜನಿಸಿದ್ದರು. 1980ರಲ್ಲಿ ವಿದ್ಯಾರ್ಥಿ ನಾಯಕರಾಗಿ ಅವರು ರಾಜಕೀಯ ಜೀವನ ಆರಂಭಿಸಿದರು. ನಂತರ ಕಾಂಗ್ರೆಸ್ ಪಕ್ಷದಲ್ಲಿ ಹಲವು ಮೆಟ್ಟಿಲು ಏರಿ ಉನ್ನತ ಹಂತ ತಲುಪಿದ್ದಾರೆ.

1989ರಲ್ಲಿ ಸಾತನೂರು ವಿಧಾನಸಭಾ ಕ್ಷೇತ್ರದಿಂದ ಮೊದಲ ಚುನಾವಣೆ ಎದುರಿಸಿದ್ದರು. ಆಗ ಅವರಿಗೆ ಕೇವಲ 27 ವರ್ಷ ವಯಸ್ಸಾಗಿತ್ತು. 2008ರಲ್ಲಿ ಈ ಕ್ಷೇತ್ರ ಪುನರ್ ವಿಂಗಡಣೆಯಾಗಿ ಕನಕಪುರ ಎಂಬ ಹೆಸರು ಪಡೆಯಿತು.

ಮೂರು ದಶಕಗಳ ಸುದೀರ್ಘ ರಾಜಕೀಯ ಜೀವನದ ನಂತರ 2023ರ ವಿಧಾನಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್‌ಗೆ ಮಹತ್ವದ ಬಹುಮತ ಸಿಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಒಕ್ಕಲಿಗ ಸಮುದಾಯದ ಪ್ರಮುಖ ನಾಯಕರಾಗಿರುವ ಅವರು, ಕನಕಪುರದಲ್ಲಿ ಸತತವಾಗಿ ಗೆಲ್ಲುತ್ತಾ ಬಂದಿದ್ದಾರೆ. ಈ ಬಾರಿ ಅವರು ಕ್ಷೇತ್ರದಲ್ಲಿ 1.22 ಲಕ್ಷ ಮತಗಳ ಭರ್ಜರಿ ಗೆಲುವು ಸಾಧಿಸಿದ್ದಾರೆ.

# ಗೋವಿನಾಳು: ಅಜ್ಜಿಯ ಕೈ ತುತ್ತು ಕಾರ್ಯಕ್ರಮ



ಹರಿಹರ, ಮೇ 18- ಹರಿಹರ ತಾಲ್ಲೂಕಿನ ಗೋವಿನಾಳು ಗ್ರಾಮದಲ್ಲಿ ನಕ್ಷತ್ರ ಜ್ಞಾನ ವಿಕಾಸ ಕೇಂದ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಅಜ್ಜಿಯ ಕೈ ತುತ್ತು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ತಾಲ್ಲೂಕಿನ ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಶ್ರೀಮತಿ ಸವಿತ, ಸಂಪನ್ಮೂಲ ವ್ಯಕ್ತಿಗಳಾದ ಡಾ. ಮಲ್ಲಿಕಾರ್ಜುನ ಕಲಾಲ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಹಿಂದಿನ ಕಾಲದಲ್ಲಿ ಕೂಡು ಕುಟುಂಬ ಸಾಮಾನ್ಯವಾಗಿತ್ತು. ಮನೆಯಲ್ಲಿ ಹಿರಿಯರ ಮಾರ್ಗದರ್ಶನದಂತೆ ಒಟ್ಟಾಗಿ ಜೀವನ ನಡೆಸುತ್ತಿದ್ದರು. ಅಜ್ಜ - ಅಜ್ಜಿಯರು ತಮ್ಮ ಮಕ್ಕಳಿಗೆ ನೀತಿ ಕಥೆ, ಪೌರಾಣಿಕ ಕಥೆಯನ್ನು ಹೇಳುತ್ತಿದ್ದರು. ಹಬ್ಬ ಹರಿದಿನದ ಮಹತ್ವ ತಿಳಿಸಿ, ಕೈ ತುತ್ತು ನೀಡುವುದು ಸಾಮಾನ್ಯವಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕೂಡು ಕುಟುಂಬವು ಮರೆಯಾಗಿದ್ದು, ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಇಂತಹ ಕಾರ್ಯಕ್ರಮಗಳ ಮೂಲಕ ಮಕ್ಕಳಿಗೆ ಹಿರಿಯರ ಬಗ್ಗೆ ಗೌರವ, ಸಮಾಜದ ಕಳಕಳಿ ಹೆಚ್ಚುತ್ತದೆ ಎಂದು ಮುಖ್ಯ ಅತಿಥಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಸೇವಾ ಪ್ರತಿನಿಧಿಯಾದ ಕೊಟ್ರೇಶ್ ಮತ್ತು ಇತರರು ಉಪಸ್ಥಿತರಿದ್ದರು.

## ಹತಾತ್ ಬೆಳವಣಿಗೆಯಲ್ಲಿ ರಿಜಿಜು ಖಾತೆ ಬದಲು

ನವದೆಹಲಿ, ಮೇ 18 – ಹಠಾತ್ ಬೆಳವಣಿಗೆಯಲ್ಲಿ ಕೇಂದ್ರ ಸಂಪುಟದಲ್ಲಿ ಬದಲಾವಣೆ ತರಲಾಗಿದ್ದು, ಅರ್ಜುನ್ ರಾಮ್ ಮೆಘ್ವಾಲ್ ಅವರನ್ನು ಕಾನೂನು ಸಚಿವರಾಗಿ ನೇಮಿಸಲಾಗಿದೆ.

**ಮೆಘ್ವಾಲ್ ನೂತನ ಕಾನೂನು ಸಚಿವ**

ಇದುವರೆಗೂ ಕಾನೂನು ಸಚಿವರಾಗಿದ್ದ ಕಿರಣ್ ರಿಜಿಜು ಅವರನ್ನು ಭೂ ವಿಜ್ಞಾನ ಸಚಿವಾಲಯಕ್ಕೆ ವರ್ಗಾಯಿಸಲಾಗಿದೆ. ರಿಜಿಜು ಅವರು ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ವಿರುದ್ಧ ವಾಗ್ದಾಳಿ ನಡೆಸಿ ವಿವಾದಕ್ಕೆ ಕಾರಣವಾಗಿದ್ದರು.

ಕೆಲ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ಕೆಲ ಕಾರ್ಯಕರ್ತರು ಭಾರತ ವಿರೋಧಿ ತಂಡದ ಭಾಗವಾಗಿದ್ದಾರೆ. ಅವರು ನ್ಯಾಯಾಂಗ ಪ್ರತಿಪಕ್ಷದ ಕಾರ್ಯ ನಿರ್ವಹಿಸುವಂತೆ ಮಾಡುವ ಪ್ರಯತ್ನ ನಡೆಸಿದ್ದಾರೆ ಎಂದು ರಿಜಿಜು ಹೇಳಿದ್ದರು. ಮೆಘ್ವಾಲ್ ಅವರು ಪ್ರಸಕ್ತ ಸಂಸದೀಯ ವ್ಯವಹಾರಗಳ ಅಧೀನ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

# ಭಾರತ ಸದೃಢವಾಗಲು ಸಂವಿಧಾನವೇ ಸಾಕ್ಷಿ

ದಾವಣಗೆರೆ, ಏ.18- ಭಾರತ ಸದೃಢವಾಗಲು ಅಂಬೇಡ್ಕರ್ ಅವರ ಸಂವಿಧಾನವೇ ಸಾಕ್ಷಿಯಾಗಿದೆ. ಇಂದಿನ ಯುವಕರಿಗೆ ಅವರೇ ಸ್ಫೂರ್ತಿ ಎಂದು ವೀರೇಶ್ವರ ಪುಣ್ಯಾಶ್ರಮದ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ ಹೇಳಿದರು.



ಅವರು ಬಾಡಾ ಕ್ರಾಸ್ ಬಳಿ ಇರುವ ವೀರೇಶ್ವರ ಪುಣ್ಯಾಶ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕ ದ ವತಿಯಿಂದ ಅಂಬೇಡ್ಕರ್ ಜಯಂತಿಯ ಅಂಗವಾಗಿ ಮತ್ತು ಕರವೇ ಯುವ ಘಟಕದ ಅಧ್ಯಕ್ಷ ಗೋಪಾಲ ದೇವರ ಮನೆ ಹುಟ್ಟು ಹಬ್ಬದ ಆಚರಣೆ ಸಂದರ್ಭದಲ್ಲಿ ಶ್ರೀ ಪಂಚಾಕ್ಷರಿ ಗವಾಯಿಗಳ ಅಂಧರ ಶಿಕ್ಷಣ ಸಮಿತಿಯ ಆವರಣ ದಲ್ಲಿ ಏರ್ಪಡಿಸಿದ್ದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಶದ ಯಾವುದೇ ಹಳ್ಳಿ ಹಳ್ಳಿಗಳಲ್ಲಿ ಹೋದರೆ ಅಂಬೇಡ್ಕರ್ ಅವರ ಭಾವಚಿತ್ರ ಕಾಣಲು ಸಾಧ್ಯವಾಗುತ್ತದೆ. ಇದಕ್ಕೆ ಕಾರಣ ಅವರು ನೀಡಿದ ಸಂವಿಧಾನ ಮತ್ತು ಅವರು ಮಾಡಿದ ಸಾಧನೆ ಎಂದರು.

ಬುದ್ಧ ಬಸವ ಅಂಬೇಡ್ಕರ್ ಈ ದೇಶದ ಆಸ್ತಿ . ಸರ್ವರಿಗೂ ಸಮ ಪಾಲು ಸರ್ವರಿಗೂ ಸಮಬಾಳು. ಇದರ ಉದ್ದೇಶ ದೇಶದಲ್ಲಿರುವ ಎಲ್ಲಾ ಪ್ರಜೆಗಳು ಸುಖವಾಗಿ ಬಾಳಬೇಕೆಂದು ನೂರಾರು ಕಾನೂನು ಮಾಡುವ ಮೂಲಕ ಪ್ರತಿ ಹಂತದಲ್ಲೂ ಪ್ರತಿಯೊಬ್ಬ ಮನುಷ್ಯರಿಗೆ ಎಲ್ಲಾ ಹಕ್ಕುಗಳು ಸಿಗಬೇಕು ಎಂದು ಈ ಕಾನೂನು ಮಾಡಲಾಯಿತು . ಆದರೆ ಕೆಲವರು ಇದನ್ನು ದುರುಪಯೋಗ ಮಾಡಿಕೊಂಡು ದೇಶಕ್ಕೆ ಮಾರಕವಾಗುತ್ತಿದ್ದಾರೆ. ಇಂಥವರಿಗೆ ಜನರೇ ತಕ್ಕ ಪಾಠ ಕಲಿಸಬೇಕು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು ಮಾತನಾಡಿದರು. ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು. ನಗರ ಪಾಲಿಕೆ ಸದಸ್ಯ ಪಾಮೇನಹಳ್ಳಿ ನಾಗರಾಜ್, ಉದ್ಯಮಿದಾರರ ಘಟಕದ ಉಪಾಧ್ಯಕ್ಷ ಓ. ಮಹೇಶ್ವ ರಪ್ಪ. ಜಿ. ಎಸ್. ಸಂತೋಷ್, ಎನ್.ಟಿ. ಹನುಮಂತಪ್ಪ. ಡಿ. ಮಲ್ಲಿಕಾರ್ಜುನ್. ಎನ್.ಬಿ.ಎ. ಲೋಕೇಶ್. ಜಿ. ಬಸವರಾಜ್, ಆರ್. ರವಿಕುಮಾರ್, ಬಾಡ ಸೈಫುಲ್ಲಾ . ಸೋಮಯ್ಯ . ಪರಮೇಶ್. ಮಂಜುನಾಥ್ . ಮೆಹಬೂಬ್. ಮೋಹನ್. ಸಲೀಂ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ: ಗಿಡ-ಮರಗಳಿಗೆ ನೀರುಣಿಸಲು ಜಯ ಕರ್ನಾಟಕ ಸಂಘಟನೆ ಆಗ್ರಹ



ಹರಿಹರ, ಮೇ 18- ಅತಿಯಾದ ಬಿಸಿಲಿಗೆ ಗಿಡ, ಮರಗಳು ಒಣಗುತ್ತಿರುವ ಹಿನ್ನೆಲೆಯಲ್ಲಿ ಬೇಸಿಗೆ ಕಾಲ ಮುಗಿಯುವವರೆಗೂ ನಗರಸಭೆ ವತಿಯಿಂದ ಗಿಡ, ಮರಗಳಿಗೆ ಪ್ರತಿದಿನ ನೀರು ಬಿಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಜಯ ಕರ್ನಾಟಕ ಸಂಘಟನೆ ಪದಾಧಿಕಾರಿಗಳು ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.

ಜಯ ಕರ್ನಾಟಕ ಸಂಘಟನೆಯ ತಾಲ್ಲೂಕು ಘಟಕದ ವತಿಯಿಂದ ಹರಿಹರ ನಗರಸಭೆ ವ್ಯಾಪ್ತಿಗೊಳಪಟ್ಟ ಹರಪನಹಳ್ಳಿ ರಸ್ತೆ, ಗುತ್ತೂರು ಕಾಲೋನಿ, ಯಶಸ್ವಿನಿ ಕಲ್ಯಾಣ ಮಂಟಪ ಮುಂಭಾಗದಿಂದ ಗುತ್ತೂರು ಕಾಲೋನಿ ವೆಲ್ಕಮ್ ಬೋರ್ಡಿನವರೆಗೂ 100ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದ್ದು. ಅವುಗಳು ಪ್ರಸ್ತುತ ಮರಗಳಾಗಿ ಬೆಳೆಯುವ ಹಂತದಲ್ಲಿವೆ. ಬೇಸಿಗೆಗಾಲ ಮುಗಿಯುವ ತನಕ ನೀರು ಬಿಡಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ತಾಲ್ಲೂಕು ಅಧ್ಯಕ್ಷ ಎಸ್.ಗೋವಿಂದ, ಪ್ರಧಾನ ಕಾರ್ಯದರ್ಶಿ ಸುನಿಲ್ ಸಿ.ಎಚ್, ಖಜಾಂಚಿ ಶಬರೀಶ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಶ್ರೀನಿವಾಸ್, ದಾದಾಪೀರ್ ಗಂಗಾನಗರ, ವಿಜಯ್ ಪೈ, ಚಂದ್ರು ಆಶ್ರಯ ಕಾಲೋನಿ, ದುನಿಯಾ, ಈಶ್ವರ್, ನಾರಾಯಣಪ್ಪ ಮತ್ತಿತರರಿದ್ದರು.

# ಡೆಂಗ್ಯೂ ಕಾಯಿಲೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ

ದಾವಣಗೆರೆ, ಮೇ 18- ಡೆಂಗ್ಯೂ ತಡೆಗಟ್ಟಲು ಸಮುದಾಯವು ಮುನ್ನೆಚ್ಚರಿಕೆ ವಹಿಸುವ ಜೊತೆಗೆ ಇಲಾಖೆಯೊಂದಿಗೆ ಕೈ ಜೋಡಿಸಿದರೆ ಡೆಂಗ್ಯೂ ಜ್ವರ ಮುಕ್ತ ಕರ್ನಾ ಟಕವನ್ನಾಗಿ ಮಾಡಬಹುದು ಎಂದು ಆಡಳಿತ ವೈದ್ಯಾಧಿಕಾರಿ ಡಾ.ಶಶಿಕಲಾ ತಿಳಿಸಿದರು.



ಮಂಗಳವಾರ ಕೊಂಡಜ್ಜಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೇಸಿಗೆ ಕಾಲ ಹಾಗೂ ಮಳೆಗಾಲದ ಸಮಯದಲ್ಲಿ ಡೆಂಗ್ಯೂ ಪ್ರಕರಣಗಳು ಉಲ್ಬಣವಾಗುತ್ತವೆ. ದಿನಬಳಕೆಗಾಗಿ ಸಂಗ್ರಹಿಸಿದ ನೀರನ್ನು ಯಾವಾಗಲೂ ಮುಚ್ಚಿಡಬೇಕು. ಡೆಂಗ್ಯೂ ತಡೆಗಟ್ಟಬಹುದಾದ ಕಾಯಿಲೆಯಾಗಿದ್ದು, ಭಯ ಬೀಳುವ ಅವ್ಯಶಕತೆಯಿಲ್ಲ ಎಂದರು.

ಹಗಲಲ್ಲಿ ಕಚ್ಚುವ ಹೆಣ್ಣು ಈಡೀಸ್ ಸೊಳ್ಳೆಗಳ ನಿಯಂತ್ರಣವೇ ಮುಖ್ಯವಾಗಿದೆ. ಇಲಾಖೆಯ ಜೊತೆಗೆ ಸಮುದಾಯವು ಕೈ ಜೋಡಿಸಿದರೆ ಡೆಂಗ್ಯೂ ಜ್ವರ ಮುಕ್ತ ರಾಜ್ಯವನ್ನಾಗಿ ಮಾಡಬಹುದು ಎಂದರು.

ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಎಂ.ವಿ. ಹೊರಕೇರಿ ಮಾತನಾಡಿ, ಡೆಂಗ್ಯೂ ಜ್ವರ ತೀವ್ರಗತಿಯಾದರೆ ಚಿಕಿತ್ಸೆ ಫಲಕಾರಿಯಾಗದು. ಇದನ್ನು ಮೂಳೆ ಮುರಿತದ ಜ್ವರ ಎಂದು ಕರೆಯುತ್ತಾರೆ. ಅಧಿಕ ಜ್ವರ, ದೇಹದ ನೋವು, ಕಣ್ಣಿನ ಹಿಂದೆ ನೋವು, ಕಣ್ಣು ಕೆಂಪಾಗುವುದು, ವಾಕರಿಕೆ ಮತ್ತು ವಾಂತಿ, ವಿಪರೀತ ತಲೆನೋವಿನ ಲಕ್ಷಣ. ಯಾವುದೇ ಜ್ವರ ಕಂಡುಬಂದಲ್ಲಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಉಮ್ಮಣ್ಣ ಮಾತನಾಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್, ಗ್ರಾಮ ಪಂಚಾಯ್ತಿಯ ಸದಸ್ಯೆ ವನಜಾಕ್ಷಮ್ಮ, ಕಾರ್ಯದರ್ಶಿ ಆಂಜಿನಪ್ಪ, ತಾಲ್ಲೂಕು ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಸುಧಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ತಿಪ್ಪೇಸ್ವಾಮಿ, ಆಶಾ ಮೇಲ್ವಿಚಾರಕಿ ಕವಿತಾ ಉಪಸ್ಥಿತರಿದ್ದರು.

WANTED

1. Require **Sales Men & Sales Girls** to work in cloth Store.
2. Require **Computer Operators for DATA ENTRY** Work with Basic Knowledge fo Tally.

Interested can Apply with proper Resume along with Passport Size Photo Attested.

ASHUJI DISTRIBUTORS

#323, Binny Company Road, Davanagere.

ಮೆಗಾ ಆಫರ್

Jio bp ರಿಲೈಯನ್ಸ್ ಪೆಟ್ರೋಲ್ ಬಂಕ್‌ನಲ್ಲಿ

ರಿಯಾಯಿತಿ ದರದಲ್ಲಿ ಡಿಸೇಲ್

ಮಾರುಕಟ್ಟೆ ದರಕ್ಕಿಂತ ಲೀಟರ್‌ಗೆ 1 ರೂ. ಕಡಿತ

ರಿಲೈಯನ್ಸ್ ಬಿಪಿ ಮೊಬೈಲಿಟಿ ಲಿಮಿಟೆಡ್

ಶಿವಶಂಕರ್ ಫಿಲ್ಲಿಂಗ್ ಸ್ಟೇಷನ್

ಗೋಶಾಲೆ ಎದುರು, ಆವರಗೆರೆ, ಪಿ.ಬಿ. ರಸ್ತೆ, ದಾವಣಗೆರೆ.

ಮೊಬೈಲ್ : 98441 00273

# ಸಂಗ್ರಹಿಸಿದ ನೀರನ್ನು ಮುಚ್ಚಿ ಬಳಸಿ, ಡೆಂಗ್ಯೂ ತಡೆಗಟ್ಟಬಹುದು



**ಮಲೇಬೆನ್ನೂರು : ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ ಚೇತನ್ ಕುಮಾರ್**

ಮಲೇಬೆನ್ನೂರು ಮೇ 18 - ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಕಾರ್ಯಕ್ರಮವನ್ನು ನಿನ್ನೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ವೈದ್ಯಾಧಿಕಾರಿ ಡಾ ಚೇತನ್ ಕುಮಾರ್ ಮಾತನಾಡಿ, ಬೇಸಿಗೆ ಕಾಲ ಹಾಗೂ ಮಳೆಗಾಲ ಪ್ರಾರಂಭವಾಗುವುದರಿಂದ ಡೆಂಗ್ಯೂ ಜ್ವರದ ಪ್ರಕರಣಗಳು ಉಲ್ಬಣವಾಗುತ್ತವೆ. ಆದಕಾರಣ ಸಂಗ್ರಹಿಸಿದ ನೀರನ್ನು ಮುಚ್ಚಿ ಬಳಸಿ ಡೆಂಗ್ಯೂ ತಡೆಗಟ್ಟಬಹುದಾಗಿದ್ದು, ಕಾಯಿಲೆ ಬಗ್ಗೆ ಭಯ ಬೀಳುವ ಅವಶ್ಯಕತೆ ಇಲ್ಲ. ಹಗಲಿನಲ್ಲಿ ಕಚ್ಚುವ ಈಡಿಸ್ ಸೊಳ್ಳೆಗಳ ನಿಯಂತ್ರಣ ಬಹಳ ಮುಖ್ಯವಾಗಿದೆ. ಆದುದರಿಂದ ಸಮುದಾಯವು ಕೈಜೋಡಿಸುವ ಮೂಲಕ ಡೆಂಗ್ಯೂ ಜ್ವರ ಮುಕ್ತ ರಾಜ್ಯವನ್ನಾಗಿ ಮಾಡಬಹುದು ಎಂದು ಹೇಳಿದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿ, ಡೆಂಗ್ಯೂ ಜ್ವರ ತೀವ್ರತೆಯಾದರೆ ಚಿಕಿತ್ಸೆ ಫಲಕಾರಿ ಆಗದು. ಡೆಂಗ್ಯೂ ಜ್ವರವನ್ನು ಮೂಳೆ ಮುರಿತದ ಜ್ವರ ಎಂದು ಕರೆಯುತ್ತಾರೆ. ಅಧಿಕ ಜ್ವರ, ದೇಹದ ತುಂಬ ನೋವು, ಕಣ್ಣಿನ ಹಿಂಬದಿ ನೋವು, ಕಣ್ಣು ಕೆಂಪಾಗಿರುವುದು, ವಾಕರಿಕೆ ಮತ್ತು ವಾಂತಿ, ವಿಪರೀತ ತಲೆನೋವು ಇದರ ಲಕ್ಷಣಗಳಾಗಿವೆ. ಆದ್ದರಿಂದ ಯಾವುದೇ ಜ್ವರ ಬರಲಿ ಕಡ್ಡಾಯವಾಗಿ ರಕ್ತ ಪರೀಕ್ಷೆ ಮಾಡಿಸಬೇಕು ಎಂದು ಕರೆ ನೀಡಿದರು.

ಈ ವರ್ಷದ ಘೋಷ ವಾಕ್ಯ 'ಎಲ್ಲರ ಸಹಭಾಗಿತ್ವದೊಂದಿಗೆ ಡೆಂಗ್ಯೂವನ್ನು ಸೋಲಿಸೋಣ' ಎಂದು ಹೇಳುತ್ತಾ ಆರೋಗ್ಯ ಇಲಾಖೆ ಹಾಗೂ ಇತರೆ ಇಲಾಖೆಗಳು ಮತ್ತು ಸಮುದಾಯದ ಸಹಭಾಗಿತ್ವದಿಂದ ಡೆಂಗ್ಯೂ ಜ್ವರ ನಿಯಂತ್ರಣ ಮಾಡಬಹುದು ಎಂದು ಉಮ್ಮಣ್ಣ ಹೇಳಿದರು.

ನೀರು ಸಂಗ್ರಹಿಸಿದ ತೊಟ್ಟಿ, ಬ್ಯಾರಲ್, ತೆಂಗಿನ ಚಿಪ್ಪು, ಉಪಯೋಗಕ್ಕೆ ಬಾರದ ಬಾಟಲಿಗಳು ಇತ್ಯಾದಿಗಳಲ್ಲಿ ಸಂಗ್ರಹವಾದ ನೀರಿನಲ್ಲಿ ಲಾರ್ವಗಳು ಉತ್ಪತ್ತಿಯಾಗುತ್ತವೆ. ಆದುದರಿಂದ ಸಂಗ್ರಹಿಸಿದ ನೀರನ್ನು ಹೆಚ್ಚು ಬಳಸಿ, ಮುಸ್ಸಂಜೆ ವೇಳೆ ಬೇವಿನ ಸೊಪ್ಪಿನ ಹೊಗೆ ಹಾಕಿ ಮತ್ತು ಬಾಗಿಲು ಕಿಡಿಕಿಗಳಿಗೆ ಜಾಲರಿಗಳನ್ನು ಅಳವಡಿಸಿಕೊಳ್ಳಿ, ಹಗಲು ಮತ್ತು ರಾತ್ರಿ ಮಲಗುವ ಮುನ್ನ ಸೊಳ್ಳೆ ಪರದೆ ಬಳಸಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ಪ್ರಾಥಮಿಕ ಸುರಕ್ಷಣಾಧಿಕಾರಿ ಸುಧಾ ಸುಲೇಖಾ, ಆರೋಗ್ಯ ನಿರೀಕ್ಷಣಾಧಿಕಾರಿ ದಾದಾಪೀರ್ , ಪ್ರಕಾಶ್ ನಾಯಕ್, ದೇವರಾಜ್, ಲತಾ, ಆಶಾ ರಾಣಿ ,ಜಾನ್ಸನ್ಡಿ ಅಧಿಕಾರಿ ತಿಪ್ಪೇಸ್ವಾಮಿ ಮತ್ತು ಇತರರು ಹಾಜರಿದ್ದರು.

# ಭವಿಷ್ಯ ಬದಲಿಸಲಿರುವ ಕ್ವಾಂಟಂ ಕಂಪ್ಯೂಟರ್

**ಇಂಧನ, ತ್ಯಾಜ್ಯ, ಆರೋಗ್ಯ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿದೆ ಎನ್ನುತ್ತಿರುವ ವಿಜ್ಞಾನಿ**

ಕೃತಕ ಬುದ್ಧಿವಂತಿಕೆಯ ಚಾಟ್‌ಜಿಪಿಟಿ ಕುರಿತ ಚರ್ಚೆ ಈಗ ವ್ಯಾಪಕವಾಗಿದೆ. ಕೃತಕ ಬುದ್ಧಿವಂತಿಕೆ ನಿಯಂತ್ರಿಸಲು ಸರ್ಕಾರಗಳು ನೀತಿ ರೂಪಿಸಬೇಕೆಂದು ವಿಶ್ವಸಂಸ್ಥೆ ಸಹ ಸಲಹೆ ನೀಡಿದೆ. ಆದರೆ, ಕೃತಕ ಬುದ್ಧಿವಂತಿಕೆ ರೂಪಿಸಲು ಈಗ ಬಳಸಲಾಗುತ್ತಿರುವ ಕಂಪ್ಯೂಟರ್‌ಗಳಿಗಿಂತಲೂ ಲಕ್ಷಗಟ್ಟಲೆ ವೇಗದಲ್ಲಿ ಕೆಲಸ ಮಾಡುವ ಕಂಪ್ಯೂಟರ್‌ಗಳು ಬಂದರೆ ಏನಾಗ ಬಹುದು? ಈಗಿರುವ ಕಂಪ್ಯೂಟರ್‌ಗಳು ಸಾವಿರಾರು ವರ್ಷಗಳಲ್ಲಿ ಲೆಕ್ಕ ಮಾಡುವುದನ್ನು ಕ್ಷಣಗಳಲ್ಲೇ ಲೆಕ್ಕ ಮಾಡುವ ಉಪಕರಣ ಬಂದರೆ ಏನಾಗಬಹುದು?

ಕ್ವಾಂಟಂ ಸಿದ್ಧಾಂತ ಆಧರಿಸಿದ ಕಂಪ್ಯೂಟರ್‌ಗಳು ಊಹಿಸಲಸಾಧ್ಯ ವೇಗವಾಗಿ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿವೆ. ಭೌತ ಶಾಸ್ತ್ರಜ್ಞ ಮಿಚಿಯೋ ಕಾಕು ಅವರು ಕ್ವಾಂಟಂ ಕಂಪ್ಯೂಟರ್ ಬಳಕೆ ಆರಂಭವಾದ ನಂತರದ ದಿನಗಳು ಹೇಗಿರಲಿವೆ ಎಂಬುದರ ಚಿತ್ರಣವನ್ನು ತಮ್ಮ ಇತ್ತೀಚಿನ ಪುಸ್ತಕವಾದ 'ಕ್ವಾಂಟಂ ಸುಪ್ರಮಸಿ'ಯಲ್ಲಿ ಮುಂದಿಡುತ್ತಿದ್ದಾರೆ. ಈಗಿನ ಡಿಜಿಟಲ್ ಯುಗದ ನಂತರ ಬರುವ ಕ್ವಾಂಟಂ ಯುಗ ಊಹಿಸಲಸಾಧ್ಯ ವೈಜ್ಞಾನಿಕ ಹಾಗೂ ಸಾಮಾಜಿಕ ಬದಲಾವಣೆ ತರಲಿದೆ ಎಂದವರು ಹೇಳಿದ್ದಾರೆ.

ಕ್ವಾಂಟಂ ಕಂಪ್ಯೂಟರ್‌ಗಳು ಟ್ರಾನ್ಸಿಸ್ಟರ್‌ಗಳ ಆಧಾರದ ಮೇಲೆ ಕಾರ್ಯನಿರ್ವಹಿಸುವುದಿಲ್ಲ. ಅವುಗಳು ಸಬ್‌ಅಟಾಮಿಕ್ ಆಧರಿತವಾಗಿರುತ್ತವೆ. ಭಾರೀ ಶಕ್ತಿಶಾಲಿ ಕಂಪ್ಯೂಟರ್ ಆಗಿರಲಿವೆ. ಇದು ರಾಕೆಟ್ ಇಂಜಿನ್ ಅನ್ನು ಕಾರಿಗೆ ಅಳವಡಿಸಿದ ರೀತಿಯಲ್ಲಿರಲಿದೆ ಎಂದ ಕಾಕು ಹೇಳಿದ್ದಾರೆ.

ನ್ಯೂಯಾರ್ಕ್‌ನ ಸಿಟಿ ಯುನಿವರ್ಸಿಟಿಯಲ್ಲಿ ಉಪನ್ಯಾಸಕರಾಗಿರುವ ಕಾಕು, ಕ್ವಾಂಟಂ ಕಂಪ್ಯೂಟರ್‌ಗಳಿಂದ ಭವಿಷ್ಯದ ದಿನಗಳಿಗೆ ಅತಿ ಹೆಚ್ಚಿನ ಲಾಭವಾಗಲಿದೆ ಎಂದು ನಂಬಿದ್ದಾರೆ.

ಚಾಟ್‌ಜಿಪಿಟಿ ಅಡ್ಡ ಪರಿಣಾಮಗಳ ಕುರಿತು ಅತಿಯಾಗಿ ವೈಭವೀಕರಿಸಲಾಗುತ್ತಿದೆ. ವೈಜ್ಞಾನಿಕ ಬೆಳವಣಿಗೆಗಳ ಕಾರಣದಿಂದ ಉದ್ಯೋಗದ ಮೇಲೆ ಪರಿಣಾಮವಾಗುತ್ತಿರುವುದು ಇದೇ ಮೊದಲ ಬಾರಿಯೇನೂ ಅಲ್ಲ. ಆದರೆ, ಚಾಟ್‌ಜಿಪಿಟಿಯಿಂದ ಪತ್ರಿಕೋದ್ಯಮದ ಮೇಲೆ ಅಗಾಧವಾದ ಪರಿಣಾಮವಾಗುವ ಕಾರಣ, ಪತ್ರಕರ್ತರು ಈ ಬಗ್ಗೆ ಹೆಚ್ಚು ಆಸಕ್ತಿ ತೋರುತ್ತಿದ್ದಾರೆ ಎಂದು ಕಾಕು ಹೇಳಿದ್ದಾರೆ.



ಆದರೆ, ಇದೆಲ್ಲದಕ್ಕೂ ಮೀರಿ ಕ್ವಾಂಟಂ ಕಂಪ್ಯೂಟರ್‌ಗಳು ಬರುವುದರಿಂದ ರಸಾಯನ ಶಾಸ್ತ್ರ, ಜೀವಶಾಸ್ತ್ರ ಹಾಗೂ ಭೌತಶಾಸ್ತ್ರ ಸೇರಿದಂತೆ ಮೂಲಭೂತ ಸಂಶೋಧನೆಯಲ್ಲಿ ಅಗಾಧ ಬದಲಾವಣೆ ಯಾಗಲಿದೆ. ವಾತಾವರಣದಲ್ಲಿರುವ ಕಾರ್ಬನ್ ಡೈ ಆಕ್ಸೈಡ್ ಅನ್ನು ಇಂಧನವಾಗಿ ಪರಿವರ್ತಿಸಲು ಸಾಧ್ಯವಾಗಲಿದೆ. ತ್ಯಾಜ್ಯದಿಂದ ಹೊಸ ಉಪಕರಣಗಳನ್ನು ತಯಾರಿಸಲು ಸಾಧ್ಯವಾಗಲಿದೆ. ಹೆಚ್ಚಿನ ತಾಪಮಾನವಿಲ್ಲದೇ ಗಾಳಿಯಿಂದ ನೈಟ್ರೋಜನ್ ಪಡೆಯಲು ಸಾಧ್ಯವಾಗಲಿದೆ. ಇದರಿಂದ ಹಸಿರು ಇಂಧನದ ಕ್ರಾಂತಿಯೇ ಆಗಲಿದೆ ಎಂದವರು ವಾದ ಮುಂದಿಡುತ್ತಿದ್ದಾರೆ.

ಹೊಸ ರೀತಿಯ ಬ್ಯಾಟರಿಗಳನ್ನು ಉತ್ಪಾದಿಸಿ ಹೆಚ್ಚಿನ ಇಂಧನ ಹಿಡಿದಿಡಲು ಸಾಧ್ಯವಾಗಲಿದೆ. ಇಂಜಿನಿಯರಿಂಗ್ ವಲಯ ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಉತ್ತರ ಸಿಗಲಿದೆ. ಕ್ಯಾನ್ಸರ್‌ನಿಂದ ಹಿಡಿದು ಪಾರ್ಕಿನ್‌ಸನ್ ವರೆಗೆ ಹತ್ತಾರು ರೋಗಗಳಿಗೆ ಪರಿಹಾರ ಸಿಗಲಿದೆ ಎಂದವರು ಹೇಳಿದ್ದಾರೆ.

ಇದೆಲ್ಲ ಹೇಗೆ ಸಾಧ್ಯವಾಗಲಿದೆ? ಕ್ವಾಂಟಂ ಕಂಪ್ಯೂಟರ್‌ಗಳ ಪ್ರಮುಖ ಲಾಭ ಎಂದರೆ, ಇವುಗಳು ಡಿಜಿಟಲ್ ಕಂಪ್ಯೂಟರ್‌ಗಳಿಗಿಂತ ಅತಿ ವೇಗವಾಗಿ ಕೆಲಸ ಮಾಡುತ್ತವೆ. ಇದು ಸಂಶೋಧನಾ ಕಾರ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ನೆರವಾಗಲಿದೆ. ಈಗಿರುವ ಕಂಪ್ಯೂಟರ್‌ಗಳು ಸಾಂಪ್ರದಾಯಿಕ ಭೌತಶಾಸ್ತ್ರ ತತ್ವಗಳನ್ನು ಅನುಸರಿಸಿವೆ. ಕ್ವಾಂಟಂ ಕಂಪ್ಯೂಟರ್‌ಗಳಿಗೆ ಈ ತತ್ವಗಳು ಅನ್ವಯಿಸುವುದಿಲ್ಲ. ಸಬ್‌ಅಟಾಮಿಕ್ ಆಧರಿತ ಕಂಪ್ಯೂಟರ್‌ಗಳು ಕ್ವಾಂಟಂನ ನಿಗೂಢ ತತ್ವಗಳನ್ನು ಬಳಸಿಕೊಳ್ಳುತ್ತವೆ. ಕ್ವಾಂಟಂ ನಿಗೂಢತೆಯಿಂದ ಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್ ಅವರೇ ಅಚ್ಚರಿಗೊಂಡಿದ್ದರು. ಕ್ವಾಂಟಂನ ನಿಗೂಢತೆಯನ್ನು ಬಣ್ಣಿಸಲು ಈಗಿ ರುವ ಯಾವ ಭಾಷೆಯಿಂದಲೂ ಸಾಧ್ಯವಾಗದು, ಕ್ವಾಂಟಂ ಗುಣ ವಿವರಿಸುವಷ್ಟು ಯಾವ ಭಾಷೆಯೂ ಅಭಿವೃದ್ಧಿಯಾಗಿಲ್ಲವೆಂದು ವಿಜ್ಞಾನ ಸಂವಾದಕಾರ ಸಬೈನ್ ಹಾಸೆನ್‌ಫೀಲ್ಡರ್ ಹೇಳಿದ್ದರು.

ಕ್ವಾಂಟಂ ಕಂಪ್ಯೂಟರ್‌ಗಳಿಂದ ಸಾಕಷ್ಟು ಲಾಭವಿದೆ ಎಂದು ವಿಜ್ಞಾನಿಗಳು ಹೇಳುತ್ತಾರಾದರೂ, ಅದನ್ನು ನಿರ್ಮಿಸುವುದು ಹಾಗೂ ನಿರ್ವಹಿಸುವುದು ಅತ್ಯಂತ ಕಠಿಣವಾಗಿದೆ. ಕ್ವಾಂಟಂ ಕಣಗಳು ಅತ್ಯಂತ ಸೂಕ್ಷ್ಮವಾಗಿವೆ. ಶೂನ್ಯದಷ್ಟು ಕಡಿಮೆ ತಾಪಮಾನದಲ್ಲಿ ಮಾತ್ರ ಇವು ಕಾರ್ಯನಿರ್ವಹಿಸಲು ಸಾಧ್ಯ. ಸಂಪೂರ್ಣ ನಿಶ್ಶಬ್ದ ವಾತಾವರಣ ಬಯಸುತ್ತವೆ.

